# ಸುಖ ದಾಂಪತ್ಯ

[ಪ್ರವಾದಿ ಬೋಧನೆಗಳಲ್ಲಿ]

ಡಾ. ಮೌಲಾನಾ ಸಯ್ಯದ್ ಅಹ್ಮದ್ ಉರೂಜ್ ಕಾದ್ರೀ

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

ಎಲ್ಲ ಮುಸ್ಲಿಮರಿಗೆ, ಅದರಲ್ಲೂ ಹೊಸತಾಗಿ ದಾಂಪತ್ಯ ಜೀವನ ಆರಂಭಿಸುವ ಯುವಕ-ಯುವತಿಯರಿಗೆ ಅತ್ಯುಪಯುಕ್ತವಾದ, ಉಪಭೂಖಂಡದ ಖ್ಯಾತ ವಿದ್ವಾಂಸರಲ್ಲೋರ್ವರಾಗಿದ್ದ ಮೌಲಾನಾ ಸಯ್ಯದ್ ಅಹ್ಮದ್ ಉರೂಜ್ ಕಾದ್ರೀಯವರು ಬರೆದ 'ಆದಾಬೆ, ಅಝ್ದ್ವಾಜ್' ಎಂಬ ಉರ್ದು ಪ್ರಬಂಧದ ಕನ್ನಡಾನುವಾದವೇ 'ಸುಖ ದಾಂಪತ್ಯ'ವೆಂಬ ಈ ಕಿರುಕೃತಿ.

ಈ ಕಿರುಕೃತಿಯಲ್ಲಿ ಮೌಲಾನಾರವರು ದಾಂಪತ್ಯದ ಜೀವನದಲ್ಲಿ ಪತಿ-ಪತ್ನಿಯರು ಪಾಲಿಸಬೇಕಾದ ಶಿಷ್ಟಾಚಾರಗಳನ್ನು ಕ್ರಮಬದ್ಧವಾಗಿ ಕ್ರೋಢೀಕರಿಸಿದ್ದಾರೆ. ಜೊತೆಗೆ ದಂಪತಿಗಳ ಬಂಧು ಮಿತ್ರಾದಿಗಳಿಗೂ ಸೂಕ್ತ ಮಾರ್ಗದರ್ಶನಗಳನ್ನು ನೀಡಿದ್ದಾರೆ. ಪತಿ-ಪತ್ನಿಯರ ಉತ್ತಮ ಸಹಬಾಳ್ವೆಯು ಉತ್ತಮ ಸಮಾಜ ನಿರ್ಮಾಣಕ್ಕೆ ನಾಂದಿಯಾಗುವುದೆಂದು ಪ್ರತಿಪಾದಿಸಿದ್ದಾರೆ.

ಇದರ ಅಧ್ಯಯನದಿಂದ ನವದಂಪತಿಗಳಿಗೂ ಇನ್ನೂ ಮದುವೆಯಾಗಿರದ ಯುವಕ-ಯುವತಿಗೂ, ಹಾಗೆಯೇ ಇತರರಿಗೂ ಪ್ರಯೋಜನಕಾರಿಯಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

# ಅನುಕ್ರಮಣಿಕೆ


1. ಮುನ್ನುಡಿ ........................................ 06

2. ಪ್ರಥಮ ಮಿಲನ ........................................ 09

3. ಪತ್ನಿಯ ತಲೆಯ ಮೇಲೆ ಕೈಯಿಟ್ಟು ಪ್ರಾರ್ಥಿಸುವುದು ........................................ 10

4. ಪತಿ–ಪತ್ನಿಯರು ಎರಡು ರಕಅತ್ ನಫಿಲ್ ನಮಾಝ್ ಮಾಡಬೇಕು ........................................ 10

5. ಸಂಸರ್ಗಕ್ಕೆ ಮುಂಚಿನ ಪ್ರಾರ್ಥನೆ ........................................ 11

6. ಸಂಸರ್ಗದ ವಿಧಾನ ........................................ 11

7. ನಿಷಿದ್ಧ ಸಂಭೋಗ ........................................ 12

8. ಮುಟ್ಟಾದಾಗ ........................................ 13

9. ಆರ್ತವ ಕಾಲದ ಸಂಭೋಗಕ್ಕೆ ಪರಿಹಾರ ........................................ 14

10. ಮುಟ್ಟಿನ ರಕ್ತ ನಿಂತ ನಂತರ ........................................ 14

11. ಎರಡು ಸಂಭೋಗಗಳ ಮಧ್ಯೆ ಸ್ನಾನ ಮತ್ತು ವುಝೂ ........................................ 14

12. ಪತಿ–ಪತ್ನಿಯರು ಒಂದೇ ಕಡೆ ಸ್ನಾನ ಮಾಡುವುದು ........................................ 15

13. ಜನಾಬತ್ ಸ್ಥಿತಿಯಲ್ಲಿ ಮಲಗುವುದಕ್ಕಿಂತ ಮುಂಚೆ
ವುಝೂ ಅಥವಾ ತಯಮ್ಮುಮ್ ಮಾಡುವುದು ........................................ 15

14. ಸಂಸರ್ಗ ಮತ್ತು ಪುಣ್ಯ ........................................ 16

15. ಪ್ರಥಮ ರಾತ್ರಿ ಕಳೆದು ಬೆಳಿಗ್ಗೆ ಏನು ಮಾಡಬೇಕು? ........ 17
16. ರಹಸ್ಯದ ವಿಷಯಗಳನ್ನು ಬಹಿರಂಗಪಡಿಸಬಾರದು ........ 17
17. ವಧೂ–ವರರಿಗಾಗಿ ಪ್ರಾರ್ಥಿಸುವುದು ........ 18
18. ವಲೀಮ ಕಡ್ಡಾಯ ........ 19
19. ವಲೀಮ: ರೊಟ್ಟಿ-ಮಾಂಸವೇ ನೀಡಬೇಕೆಂದಿಲ್ಲ ........ 21
20. ವಲೀಮ ಮಾಡಲು ಇತರರ ನೆರವು ........ 22
21. ವಲೀಮ ಸಿರಿವಂತರಿಗೆ ಮಾತ್ರ ಸಲ್ಲದು ........ 22
22. ವಲೀಮದ ಆಹ್ವಾನ ನಿರಾಕರಿಸಬಾರದು ........ 22
23. ಆಮಂತ್ರಿಸುವವನಿಗಾಗಿ ಉಪವಾಸ ಬಿಡುವುದು ........ 23
24. ಧರ್ಮಬಾಹಿರ ಔತಣಕ್ಕೆ ಹೋಗಬಾರದು ........ 24
25. ಆಮಂತ್ರಿಸಿದವನಿಗಾಗಿ ಪ್ರಾರ್ಥಿಸುವುದು ........ 25
26. ಪ್ರವಾದಿಚರ್ಯೆ ಮತ್ತು ಶರೀಅತ್‌ಗೆ ವಿರುದ್ಧ ನಡೆಯಬಾರದು ........ 28
27. ಪತ್ನಿಯೊಂದಿಗೆ ಸದ್ವರ್ತನೆ ........ 29
28. ಕೆಲವು ಉಪದೇಶಗಳು ........ 31

# ಮುನ್ನುಡಿ

**ಸ**ಮಾಜದ ನಿರ್ಮಾಣದಲ್ಲಿ ಒಂದೊಂದು ಕುಟುಂಬವೂ ಒಂದೊಂದು ಇಟ್ಟಿಗೆಯಂತೆ; ಕುಟುಂಬಗಳು ಸೇರಿದರೆ ಅದು ಸಮಾಜವಾಗುತ್ತದೆಂದು ಪ್ರತಿಯೊಬ್ಬ ಸುಶಿಕ್ಷಿತ ಮಾತ್ರವಲ್ಲ ಪ್ರತಿಯೊಬ್ಬ ಪ್ರೌಢ ವ್ಯಕ್ತಿಯೂ ತಿಳಿದಿರುತ್ತಾನೆ. ಈ ಇಟ್ಟಿಗೆಗಳು ಎಷ್ಟು ಬಲಿಷ್ಠವಾಗಿ ಜೋಡಿಸಲ್ಪಡುವುದೋ ಅಷ್ಟೇ ಆ ಸಮಾಜವೂ ಬಲಿಷ್ಠ ವಾಗಿರುವುದು. ಅವು ಸುವ್ಯವಸ್ಥಿತವಾಗಿ ಜೋಡಿಸಿಡಲ್ಪಡದಿದ್ದರೆ ಸಮಾಜವು ಸಡಿಲವೂ ಅಭದ್ರವೂ ಆಗಿರುವುದು. ಒಂದು ನಾಗರಿಕ ಮಾನವ ಕುಟುಂಬವು ಒಂದು ಗಂಡು ಮತ್ತು ಒಂದು ಹೆಣ್ಣಿನ ಧರ್ಮಬದ್ಧ ಮಿಲನದಿಂದ ಅಸ್ತಿತ್ವಕ್ಕೆ ಬರುತ್ತದೆ ಎಂಬುದು ಎಲ್ಲರಿಗೂ ಗೊತ್ತು. ಈ ಧರ್ಮಬದ್ಧ ಮಿಲನವು ನಿಕಾಹ್ ಅಥವಾ ವಿವಾಹದಿಂದ ಉಂಟಾಗುತ್ತದೆ. ಈ ರೀತಿ ನಾಗರಿಕ ಸಮಾಜದಲ್ಲಿ ವಿವಾಹಕ್ಕಿರುವ ಮಹತ್ವವನ್ನು ವಿವರಿಸುವ ಅಗತ್ಯವಿಲ್ಲ.

ಇಸ್ಲಾಮೀ ಸಮಾಜ ಮತ್ತು ಇಸ್ಲಾಮೀ ಕುಟುಂಬದಲ್ಲಿ ವಿವಾಹವೆಂಬುದು ಪ್ರವಾದಿಗಳ ಚರ್ಯೆಯಾಗಿದ್ದು ಅದೊಂದು ಇಬಾದತ್ ಎಂದು ಪರಿಗಣಿಸಲಾಗಿದೆ. ವಿವಾಹದಿಂದ ಓರ್ವ ಪ್ರೌಢ ಗಂಡು ಮತ್ತು ಪ್ರೌಢೆಯಾದ ಓರ್ವ ಹೆಣ್ಣು ಪರಸ್ಪರ ಮಿಲನಗೊಳ್ಳುವ 'ಪ್ರಥಮ ರಾತ್ರಿ'ಯು ಅತ್ಯಂತ ಭಾವಪೂರ್ಣ, ಸಂತೋಷಭರಿತ ಹಾಗೂ ಉನ್ಮಾದದಿಂದ ಕೂಡಿರುತ್ತದೆ. ಈ ಉನ್ಮಾದದ ರಾತ್ರಿ ತಮ್ಮ ವಿಕಾರ ಗಳನ್ನು ನಿಯಂತ್ರಿಸುವುದು ಮತ್ತು ಶರೀಅತ್ ನಿಶ್ಚಯಿಸಿದ ಮಿತಿಯನ್ನು ದಾಟದೆ ಇರುವುದು ಅಷ್ಟೊಂದು ಸುಲಭ ಕಾರ್ಯವಲ್ಲ. ಅತ್ಯಂತ ಭಾವಪೂರ್ಣವಾದ ಇಂತಹ ರಾತ್ರಿಯನ್ನು ಕೂಡಾ ದಿಕ್ರ್ ಮತ್ತು ದುಆ (ದೇವಸ್ಮರಣೆ ಮತ್ತು ಪ್ರಾರ್ಥನೆ)ಗಳಿಂದ ಸಂಪನ್ನಗೊಳಿಸಿರುವುದು ಇಸ್ಲಾಮೀ ಬೋಧನೆಗಳ ವೈಶಿಷ್ಟ್ಯವಾಗಿದೆ.

ಪ್ರಸಕ್ತ ಮುಸ್ಲಿಮ್ ಸಮಾಜದಲ್ಲಿ ಸಾಮಾನ್ಯ ಜನರನ್ನು ನಿಕಾಹ್, ತಲಾಕ್, ಖುಲಾ ಮತ್ತಿತರ ವಿಧಿಗಳ ಬಗ್ಗೆ ಯಾವ ರೀತಿಯಲ್ಲಿ ತಿಳುವಳಿಕೆಯಿಲ್ಲದವರಾಗಿ ಮಾಡಲಾಗಿದೆಯೋ, ಅದೇ ರೀತಿಯಲ್ಲಿ ನಿಕಾಹ್‌ನ ನಂತರ ಪತ್ನಿಯೊಂದಿಗೆ ಪ್ರಥಮ ರಾತ್ರಿಯಲ್ಲಿ ಯಾವ ಶಿಷ್ಟಾಚಾರಗಳನ್ನು ಪಾಲಿಸಬೇಕು ಮತ್ತು ಆ ರಾತ್ರಿ ಕಳೆದ ನಂತರದ ಶರೀಅತ್ ವಿಧಿಗಳೇನು ಎಂಬುದನ್ನೂ ಅವರು ತಿಳಿದಿರುವುದಿಲ್ಲ. ಈ ಬಗ್ಗೆ ತಿಳುವಳಿಕೆಯುಳ್ಳವರು ಅವರಿಗೆ ಈ ವಿಷಯಗಳನ್ನು ತಿಳಿಸುವ ಮತ್ತು ಕಲಿಸುವ ಅಗತ್ಯವನ್ನೇ ಮನಗಾಣುವುದಿಲ್ಲ. ವಾಸ್ತವದಲ್ಲಿ ಅಲ್ಲಾಹನ ಅಂತಿಮ ಪ್ರವಾದಿ(ಸ) ಅವರು ತಮ್ಮ ಸಂಗಾತಿಗಳಿಗೆ ವಿವಾಹದ ನಂತರದ ಪ್ರಥಮ ರಾತ್ರಿ ಮತ್ತು ಅನಂತರದ ಧರ್ಮ ವಿಧಿಗಳನ್ನೂ ಶಿಷ್ಟಾಚಾರಗಳನ್ನೂ ಕಲಿಸಿದ್ದಾರೆಂಬುದನ್ನು ಮರೆಯಬಾರದು.

ನನಗೆ ಶೇಖ್ ನಾಸಿರುದ್ದೀನ್ ಅಲ್ಬಾನಿಯವರ "ಆದಾಬುಝ್ಝುಫಾಫ್ ಫಿಸ್ಸುನ್ನತಿಲ್ ಮುತಹ್ಹರಃ" ಎಂಬ ಅರಬಿ ಕಿರು ಹೊತ್ತಗೆಯೊಂದನ್ನು ಓದುವ ಅವಕಾಶ ಸಿಕ್ಕಿತು. ಈ ಪುಸ್ತಕವನ್ನು ಅವರ ಆಪ್ತ ಸ್ನೇಹಿತರೊಬ್ಬರು ಅವರಿಂದ ಬರೆಸಿ, ಅದನ್ನು ಮುದ್ರಿಸಿ ತನ್ನ ವಿವಾಹದ ಸಂದರ್ಭದಲ್ಲಿ ವಿತರಿಸಿದ್ದರು. ಅದೇ ಪುಸ್ತಕವನ್ನು ಮುಂದಿಟ್ಟುಕೊಂಡು ನಾನೇ ಒಂದು ಪುಸ್ತಕವನ್ನು ಬರೆದರೆ ಹೇಗೆ ಎಂದು ನನಗನಿಸಿತು. ಇದರಿಂದಾಗಿ ಪ್ರವಾದಿ ವಚನಗಳಲ್ಲಿರುವ ಇದರ ಬೋಧನೆಗಳು ಸಾರ್ವತ್ರಿಕವಾಗಬೇಕು ಮತ್ತು ತಮ್ಮ ಪತ್ನಿಯರೊಂದಿಗೆ ಲೈಂಗಿಕ ಬೇಡಿಕೆಯನ್ನು ಪೂರೈಸುವಾಗ ಯಾವೆಲ್ಲ ಶಿಷ್ಟಾಚಾರಗಳನ್ನು ಮತ್ತು ವಿಧಿಗಳನ್ನು ಪಾಲಿಸಬೇಕು ಎಂಬುದೂ ಮುಸ್ಲಿಮರಿಗೆ ತಿಳಿಯಬೇಕು ಎಂಬ ಉದ್ದೇಶವೂ ಇದರಲ್ಲಿ ಅಡಕವಾಗಿತ್ತು. ಇಂದು ಮುಸ್ಲಿಮ್ ಸಮಾಜ ಎಷ್ಟೊಂದು ಬದಲಾವಣೆ ಗೊಂಡಿದೆಯೆಂದರೆ ಅರಬಿ ವಿದ್ಯಾಲಯಗಳಿಂದ ಹೊರಬರುವ ವಿದ್ಯಾರ್ಥಿಗಳು ಹಾಗೂ ವಿದ್ವಾಂಸರಲ್ಲಿ ಕೂಡಾ ಹೆಚ್ಚಿನವರಿಗೆ ವಿವಾಹದ ಪ್ರಥಮ ರಾತ್ರಿಯ ಈ ಶಿಷ್ಟಾಚಾರಗಳನ್ನು ಪಾಲಿಸುವ ಸೌಭಾಗ್ಯ ದೊರಕುವುದಿಲ್ಲ. ಮಾತ್ರವಲ್ಲ ಇಂತಹ ವಿಷಯಗಳನ್ನು ವಿವರಿಸುವುದು 'ನಾಚಿಗೇಡಿ'ನ ಕೆಲಸವೆಂದು ಭಾವಿಸಲಾಗುತ್ತದೆ. ಆದುದರಿಂದಲೇ ಈ ವಿಷಯದಲ್ಲಿ ಉರ್ದು ಭಾಷೆಯಲ್ಲಿ ಇಂತಹ ಒಂದು ಪುಸ್ತಕ ನನ್ನ ತಿಳುವಳಿಕೆಯ ಮಟ್ಟಿಗೆ ಈ ವರೆಗೂ ಪ್ರಕಟವಾಗಿಲ್ಲ.

ಈ ಪುಸ್ತಕವು ಶೇಖ್ ಅಲ್ಬಾನಿಯವರ ಪುಸ್ತಕದ ಅನುವಾದವಲ್ಲ. ನಾನು ಅವರ ಪುಸ್ತಕದ ವಿಷಯಗಳ ಕ್ರಮವನ್ನೂ ಬದಲಿಸಿದ್ದೇನೆ. ಅದರಲ್ಲಿ ಸೇರ್ಪಡೆಯನ್ನೂ ಮಾಡಿದ್ದೇನೆ. ಅವರ ಪುಸ್ತಕದಲ್ಲಿದ್ದಂತಹ ಕೆಲವು ಚರ್ಚಾ ವಿಷಯಗಳನ್ನು ಕೈ ಬಿಟ್ಟಿದ್ದೇನೆ ಕೂಡಾ. ಈ ಪುಸ್ತಕದಲ್ಲಿ ಕೇವಲ ಪ್ರಥಮ ರಾತ್ರಿಯ ಶಿಷ್ಟಾಚಾರಗಳನ್ನು ವಿವರಿಸಿರುವುದಲ್ಲ. ಬದಲಾಗಿ ವಿವಾಹಕ್ಕೆ ಸಂಬಂಧಿಸಿದಂತೆ ಇನ್ನಿತರ ಕೆಲವು ವಿಧಿ-ನಿಯಮಗಳನ್ನೂ ವಿವರಿಸಿದ್ದೇನೆ. ಅವುಗಳನ್ನು ಕ್ರಮಪ್ರಕಾರ ಕ್ರೋಢೀಕರಿಸಿದ್ದೇನೆ. ಅಲ್ಲಾಹನು ಪ್ರವಾದಿಯ(ಸ). ಈ ಬೋಧನೆಗಳ ಪ್ರಕಾಶನವನ್ನು ಸ್ವೀಕರಿಸಲಿ. ಆಮೀನ್.

ಡಾ. ಸಯ್ಯದ್ ಅಹ್ಮದ್ ಉರೂಜ್ ಕಾದ್ರೀ

# ಪ್ರಥಮ ಮಿಲನ

ಓರ್ವ ಪತಿಯು ತನ್ನ ನವ ವಧುವನ್ನು ಪ್ರಪ್ರಥಮ ಬಾರಿ ಸಂದರ್ಶಿಸಿದಾಗ ಆತ್ಮೀಯತೆ ಮೂಡಿಸಬಲ್ಲಂತಹ ಯಾವುದಾದರೂ ಕೆಲಸ ಮಾಡುವುದು ಉತ್ತಮ. ಉದಾ: ತನ್ನ ಕೈಯಿಂದ ಆಕೆಗೆ ಹಾಲು ಅಥವಾ ಸಿಹಿ ಪಾನೀಯವನ್ನು ಕುಡಿಸುವುದು. ಹ. ಆಯಿಶಾ(ರ)ರನ್ನು ಸಿಂಗರಿಸಿದ ನಂತರ ಪ್ರವಾದಿವರ್ಯರನ್ನು(ಸ) ಅವರ ಬಳಿ ಕರೆ ತಂದಾಗ ಅವರ ಪ್ರಥಮ ಮಿಲನ ಯಾವ ರೀತಿ ಆಯಿತೆಂಬುದನ್ನು ಹ. ಅಸ್ಮಾ ಬಿಂತು ಯಝೀದ್ ಈ ರೀತಿ ವಿವರಿಸುತ್ತಾರೆ;

"ನಾನು ಆಯಿಶಾರನ್ನು ಪ್ರವಾದಿ(ಸ) ಅವರಿಗಾಗಿ ಸಿಂಗರಿಸಿದ ನಂತರ ಅವರ ಕೋಣೆಗೆ ಪ್ರವಾದಿ(ಸ) ಅವರನ್ನು ಕರೆದೆ. ಅವರು ಬಂದು ಆಯಿಶಾರ ಬಳಿ ಕುಳಿತರು. ತರುವಾಯ ಒಂದು ಲೋಟ ಹಾಲು ತರಲಾಯಿತು. ಪ್ರವಾದಿ(ಸ) ಸ್ವಲ್ಪ ಕುಡಿದು, ಆಯಿಶಾರಿಗೆ ನೀಡಿದರು. ಅವರು ತನ್ನ ತಲೆಯನ್ನು ನಾಚಿಕೆಯಿಂದ ಇನ್ನಷ್ಟು ತಗ್ಗಿಸಿದರು. ನಾನು ಪ್ರವಾದಿವರ್ಯರಿಂದ ಹಾಲು ತೆಗೆದುಕೊಳ್ಳುವಂತೆ ಆಯಿಶಾರಿಗೆ ಸೂಚಿಸಿದೆ. ಅವರು ತೆಗೆದುಕೊಂಡು ಸ್ವಲ್ಪ ಕುಡಿದರು. ಅನಂತರ ಪ್ರವಾದಿವರ್ಯರು ಅದನ್ನು ನಿನ್ನ ಸಖಿಗೆ ನೀಡು ಎಂದು ಹೇಳಿದರು. ಆಗ ನಾನು ಹೇಳಿದೆ, "ಪ್ರವಾದಿವರ್ಯರೇ! ಲೋಟವನ್ನು ತಾವೇ ತೆಗೆದು ಇನ್ನೊಮ್ಮೆ ಸ್ವಲ್ಪ ಕುಡಿದು ನನಗೆ ನೀಡಿರಿ." ಪ್ರವಾದಿ(ಸ) ಹಾಗೆಯೇ ಮಾಡಿದರು. ನಾನು ಕುಳಿತು ಕೊಂಡು ಲೋಟವನ್ನು ನನ್ನ ಮೊಣಕಾಲಿನ ಮೇಲಿಟ್ಟೆ. ಆ ಬಳಿಕ ಪ್ರವಾದಿ(ಸ) ಕುಡಿದಿದ್ದ ಭಾಗವನ್ನು ತಿರುಗಿಸಿ ಅಲ್ಲಿಂದಲೇ ಹಾಲು ಕುಡಿದೆ. ನನ್ನ ಬಳಿ ಇನ್ನೂ ಕೆಲವು ಹೆಂಗಸರಿದ್ದರು. ಅವರಿಗೂ ನೀಡುವಂತೆ ಪ್ರವಾದಿ(ಸ) ಹೇಳಿದರು. ಆ ಹೆಂಗಸರು ತಮಗೆ ಬೇಕಾಗಿಲ್ಲವೆಂದು ತಿಳಿಸಿದರು. ಆಗ ಪ್ರವಾದಿ(ಸ) ಹೇಳಿದರು: ಹಸಿವು ಮತ್ತು ಸುಳ್ಳನ್ನು ಜೊತೆಗಿರಿಸಬೇಡಿರಿ.

(ಮುಸ್ನದ್ ಅಹ್ಮದ್, ಮುಸ್ನದ್ ಹಮಿೂದೀ)

## ಪತ್ನಿಯ ತಲೆಯ ಮೇಲೆ ಕೈಯಿಟ್ಟು ಪ್ರಾರ್ಥಿಸುವುದು

ನಿಮ್ಮ ಪೈಕಿ ಯಾರಾದರೂ ಮದುವೆಯಾದರೆ ಆತ ತನ್ನ ಪತ್ನಿಯ ಹಣೆಯ ಕೂದಲ ಮೇಲೆ ಕೈಯಿಟ್ಟು ಬರ್ಕತ್(ಸಮೃದ್ಧಿ)ಗಾಗಿ ಈ ರೀತಿ ಪ್ರಾರ್ಥಿಸಬೇಕೆಂದು ಪ್ರವಾದಿ(ಸ) ಹೇಳಿದ್ದಾರೆ:

اَللّٰهُمَّ اِنِّي اَسْأَلُكَ خَيْرَهَا وَخَيْرَ مَا جَبَلْتَهَا عَلَيْهِ وَاَعُوذُ بِكَ
مِنْ شَرِّهَا وَشَرِّ مَا جَبَلْتَهَا عَلَيْهِ

"ಅಲ್ಲಾಹುಮ್ಮ ಇನ್ನೀ ಅಸ್‌ಅಲುಕ ಖೈರಹಾ ವ ಖೈರ ಮಾ ಜಬಲ್ತಹಾ ಅಲೈಹಿ. ವ ಅವೂದುಬಿಕ ಮಿನ್ ಶರ್ರಿಹಾ ವ ಶರ್ರಿ ಮಾ ಜಬಲ್ತಹಾ ಅಲೈಹಿ."

(ಅಲ್ಲಾಹನೇ! ಯಾವ ಒಳಿತಿನಿಂದ ನೀನು ಈಕೆಯನ್ನು ಸೃಷ್ಟಿಸಿರುವೆಯೋ ಅದನ್ನು ನಾನು ನಿನ್ನಿಂದ ಅಪೇಕ್ಷಿಸುತ್ತೇನೆ ಮತ್ತು ಯಾವ ಕೆಡುಕಿನಿಂದ ಈಕೆಯನ್ನು ಸೃಷ್ಟಿಸಿರುವೆಯೋ ಆ ಕೆಡುಕಿನಿಂದ ನಿನ್ನ ಅಭಯ ಯಾಚಿಸುತ್ತೇನೆ.)

(ಅಬೂದಾವೂದ್, ಮುವತ್ತಾ)

## ಪತಿ-ಪತ್ನಿಯರು ಎರಡು ರಕಅತ್ ನಫಿಲ್ ನಮಾಝ್ ಮಾಡಬೇಕು

1. ಅಬೂ ಉಸಯ್ಯಿದ್(ರ) ಅವರು ಸ್ವತಂತ್ರಗೊಳಿಸಿದ ಗುಲಾಮ ಅಬೂ ಸಈದ್ ಹೀಗೆ ವರದಿ ಮಾಡುತ್ತಾರೆ, ನಾನು ಗುಲಾಮಗಿರಿಯಲ್ಲಿದ್ದಾಗ ಮದುವೆ ಮಾಡಿಕೊಂಡೆ. ನಾನು ಪ್ರವಾದಿ(ಸ) ಅವರ ಸಂಗಾತಿಗಳ ಪೈಕಿ ಕೆಲವರನ್ನು ಕರೆದೆ. ಅವರಲ್ಲಿ ಅಬ್ದುಲ್ಲಾ ಬಿನ್ ಮಸ್‌ಊದ್, ಅಬೂದರ್, ಹುದೈಫಾ(ರ) ಮೊದಲಾದವರೂ ಇದ್ದರು. ನಮಾಝ್‌ನ ಸಮಯವಾದಾಗ ಅಬೂದರ್(ರ) ಅವರು ಮುಂದೆ ಸಾಗಿ ನಮಾಝ್ ಮಾಡಿಸಬಯಸಿದ್ದರು. ಆಗ ಇತರ ಸಹಾಬಿಗಳು ನಾನು ನಮಾಝ್ ಮಾಡಿಸುವಂತೆ ಹೇಳಿದರು. ನಾನು ನಮಾಝ್‌ನ ನೇತೃತ್ವ ವಹಿಸಿದೆ. ನಮಾಝ್‌ನ ನಂತರ ಅವರು ನನಗೆ ಈ ರೀತಿ ಬೋಧಿಸಿದರು; ನಿಮ್ಮ ಪತ್ನಿ ನಿಮ್ಮ ಬಳಿಗೆ ಬಂದಾಗ ನೀವು ಎರಡು ರಕಅತ್ ನಫಿಲ್ ನಮಾಝ್ ನಿರ್ವಹಿಸಿ ಅಲ್ಲಾಹನಲ್ಲಿ ಆಕೆಯ ಒಳಿತನ್ನು ಅಪೇಕ್ಷಿಸಿರಿ ಮತ್ತು ಆಕೆಯ ಕೆಡುಕಿನಿಂದ ಅಭಯ ಯಾಚಿಸಿರಿ. ತರುವಾಯ ನೀವು ನಿಮ್ಮ ಪತ್ನಿಯ ಬಳಿಗೆ ಹೋಗಿರಿ.

(ಅಬೂಬಕರ್ ಬಿನ್ ಶೈಬ)

2. ಶಫೀಕ್ ಹೀಗೆ ಉಲ್ಲೇಖಿಸುತ್ತಾರೆ- ಒಬ್ಬ ವ್ಯಕ್ತಿ ಅಬೂ ಹುರೈರ್ಝ್‌ಗೆ ಬಂದರು. ಅವರು ಹೀಗೆಂದರು, "ನಾನು ಓರ್ವ ಯುವ ಕನ್ಯೆಯನ್ನು ಮದುವೆಯಾದೆ. ಆಕೆ ಎಲ್ಲಾದರೂ ನನ್ನನ್ನು ತಿರಸ್ಕರಿಸಿ ಬಿಡುವಳೋ ಎಂದು ಭಯಪಟ್ಟೆ." ಇದನ್ನು

ಕೇಳಿ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳಿದರು: ಪ್ರೇಮ, ಅನುಕಂಪಗಳು ಅಲ್ಲಾಹನ ವತಿಯಿಂದಾಗಿವೆ. ದ್ವೇಷ, ತಿರಸ್ಕಾರಗಳು ಶೈತಾನನ ಕಡೆಯಿಂದಾಗಿರುತ್ತವೆ. ಅಲ್ಲಾಹನು ನಿಮಗಾಗಿ ಯಾವುದನ್ನು ಧರ್ಮಸಮ್ಮತ(ಹಲಾಲ್)ಗೊಳಿಸಿರುವನೋ ಅದನ್ನು ನೀವು ತಿರಸ್ಕರಿಸುವಂತೆ ಮಾಡಬಯಸುತ್ತಾನೆ. ಆದುದರಿಂದ ನಿಮ್ಮ ಪತ್ನಿ ನಿಮ್ಮ ಮನೆಗೆ ಬಂದಾಗ ನಿಮ್ಮ ನೇತೃತ್ವದಲ್ಲಿ ನಿಮ್ಮ ಹಿಂದೆ ಎರಡು ರಕಅತ್ ನಮಾಝ್ ಮಾಡುವಂತೆ ಆಕೆಗೆ ಆಜ್ಞಾಪಿಸಿರಿ. ತರುವಾಯ ಈ ಪ್ರಾರ್ಥನೆ ಮಾಡಿರಿ- ಓ ಅಲ್ಲಾಹ್! ನೀನು ನನ್ನವಳನ್ನು ನನ್ನ ಮಟ್ಟಿಗೆ ಅನುಗ್ರಹೀತಗೊಳಿಸು, ನನ್ನನ್ನು ಆಕೆಯ ಪಾಲಿಗೂ ಅನುಗ್ರಹದಾಯಕಗೊಳಿಸು. ನೀನು ನಮ್ಮನ್ನು ಒಟ್ಟಿಗೆ ಇರಿಸುವಷ್ಟರ ತನಕ ಒಳಿತಿನಲ್ಲಿರಿಸು. ಒಂದು ವೇಳೆ ವಿಚ್ಛೇದನವಾಗುವುದಿದ್ದರೆ ಒಳಿತಿನೊಂದಿಗೆ ಬೇರ್ಪಡಿಸು.

(ಇಬ್ನುಶೈಬ ಮತ್ತು ತಬ್ರಾನಿ)

## ಸಂಸರ್ಗಕ್ಕಿಂತ ಮುಂಚಿನ ಪ್ರಾರ್ಥನೆ

ಸಂಸರ್ಗಕ್ಕಿಂತ ಮುಂಚೆ ಪ್ರಾರ್ಥಿಸಬೇಕೆಂದು ಕಲಿಸಲಾಗಿದೆ- ಪ್ರವಾದಿ(ಸ) ಅವರು, ನಿಮ್ಮಲ್ಲಿ ಯಾರಾದರೂ ತನ್ನ ಪತ್ನಿಯೊಂದಿಗೆ ಸಂಸರ್ಗ ನಡೆಸಬಯಸಿದರೆ ಈ ರೀತಿ ಪ್ರಾರ್ಥಿಸಬೇಕೆಂದು ಹೇಳಿದ್ದಾರೆ.

بِسْمِ اللّٰهِ اَللّٰهُمَّ جَنِّبْنَا الشَّيْطَانَ وَجَنِّبِ الشَّيْطَانَ مَا رَزَقْتَنَا

"ಬಿಸ್ಮಿಲ್ಲಾಹಿ ಅಲ್ಲಾಹುಮ್ಮ ಜನ್ನಿಬ್‌ನಾ ಶ್ಶೈತಾನ ವ ಜನ್ನಿಬಿ ಶ್ಶೈತಾನ ಮಾ ರಝುಕ್‌ತನಾ."

(ಅಲ್ಲಾಹನ ನಾಮದಿಂದ! ಓ ಅಲ್ಲಾಹ್, ನಮ್ಮನ್ನು ಶೈತಾನನಿಂದ ದೂರವಿರಿಸು ಮತ್ತು ನೀನು ನೀಡುವ ರಿಝ್ಕ್ (ಅರ್ಥಾತ್, ಸಂತಾನ)ಅನ್ನೂ ಶೈತಾನನಿಂದ ರಕ್ಷಿಸು.)

(ಬುಖಾರಿ, ತಿರ್ಮಿದಿ)

## ಸಂಸರ್ಗದ ವಿಧಾನ

ಹ. ಜಾಬಿರ್(ರ) ಹೀಗೆ ಉಲ್ಲೇಖಿಸುತ್ತಾರೆ- ಯಾರಾದರೂ ತನ್ನ ಪತ್ನಿಯ ಹಿಂದಿನಿಂದ ಆಕೆಯ ಮುಂಭಾಗವನ್ನು ಸಂಭೋಗಿಸಿದರೆ ಅದರಿಂದ ಹುಟ್ಟುವ ಮಗು ಕಿವುಡಾಗಿರುವುದೆಂದು ಯಹೂದಿಯರು ಹೇಳುತ್ತಿದ್ದರು. ಅದಕ್ಕಾಗಿ ಈ ಸೂಕ್ತ ಅವತೀರ್ಣಗೊಂಡಿತು.

نِسَآؤُكُمْ حَرْثٌ لَّكُمْ فَأْتُوا حَرْثَكُمْ أَنَّى شِئْتُمْ

"ನಿಸಾಉಕುಮ್ ಹರ್ಸುನ್ ಲಕುಮ್ ಫಅ್‌ತೂ ಹರ್ಸಕುಮ್ ಅನ್ನಾ ಶಿಅ್‌ತುಮ್."

(ನಿಮ್ಮ ಪತ್ನಿಯರು ನಿಮಗೆ ಹೊಲಗಳಾಗಿದ್ದಾರೆ. ಹೇಗೆ ಬೇಕಾದರೂ ನಿಮ್ಮ ಹೊಲಗಳಿಗೆ ಹೋಗಿರಿ.) (ಅಲ್ ಬಕರಃ 223)

ಇದನ್ನು ಪ್ರವಾದಿ(ಸ) ಹೀಗೆ ವಿವರಿಸಿದರು- ಸಂಭೋಗವನ್ನು ಫರ್ಜ್ (ಯೋನಿ)ನಲ್ಲೇ ನಡೆಸಬೇಕು. ಅದು ಮುಂದಿನಿಂದಲೂ ಆಗಬಹುದೂ, ಹಿಂದಿನಿಂದಲೂ ಆಗಬಹುದು. (ಬುಖಾರಿ, ಮುಸ್ಲಿಮ್)

## ನಿಷಿದ್ಧ ಸಂಭೋಗ

ಸ್ತ್ರೀಯ ಹಿಂಭಾಗಕ್ಕೆ (ಗುದ) ಜನನಾಂಗ ತುರುಕಿಸುವುದು ನಿಷಿದ್ಧ. ಮೇಲಿನ ಉದ್ಧರಣೆಯಿಂದಲೂ ಇದು ಸಾಬೀತಾಗುತ್ತದೆ. ಅದಲ್ಲದೆ ಪ್ರವಾದಿ(ಸ) ಕೂಡಾ ಇದನ್ನು ಸ್ಪಷ್ಟವಾಗಿ ಹರಾಮ್ ಎಂದಿದ್ದಾರೆ.

1. ಹ. ಅಬ್ದುಲ್ಲಾ ಬಿನ್ ಅಬ್ಬಾಸ್(ರ) ಉಲ್ಲೇಖಿಸುತ್ತಾರೆ- ಹ. ಉಮರ್(ರ) ಅವರು ಪ್ರವಾದಿ(ಸ) ಅವರ ಬಳಿ ಬಂದು, ಪ್ರವಾದಿವರ್ಯರೇ! ನಾನು ನಾಶವಾದೆ ಎಂದರು. ಪ್ರವಾದಿ(ಸ) ಕೇಳಿದರು- ನಿಮ್ಮನ್ನು ಯಾವುದು ನಾಶಗೊಳಿಸಿತು? ಹ. ಉಮರ್(ರ) ಅವರು ಸೂಚನೆಯ ಮೂಲಕ ಹೀಗೆಂದರು- ಇಂದು ರಾತ್ರಿ ನಾನು ನನ್ನ ಜೀನನ್ನು ಮಗುಚಿದೆ. (ಇದು ಪತ್ನಿಯನ್ನು ಹಿಂಭಾಗದಿಂದ ಸಂಭೋಗಿಸಿದೆನೆಂಬ ಸೂಚನೆಯಾಗಿತ್ತು) ಅವರಿಗೆ ಪ್ರವಾದಿ(ಸ) ಏನೂ ಉತ್ತರ ನೀಡಲಿಲ್ಲ. ಆಗ ಈ ಸೂಕ್ತ ಅವತೀರ್ಣಗೊಂಡಿತು.

نِسَآؤُكُمْ حَرْثٌ لَّكُمْ فَأْتُوا حَرْثَكُمْ أَنَّى شِئْتُمْ

"ನಿಸಾಉಕುಮ್ ಹರ್ಸುನ್ ಲಕುಮ್ ಫಅ್‌ತೂ ಹರ್ಸಕುಮ್ ಅನ್ನಾ ಶಿಅ್‌ತುಮ್."

(ನಿಮ್ಮ ಪತ್ನಿಯರು ನಿಮಗೆ ಹೊಲಗಳಾಗಿದ್ದಾರೆ. ನೀವು ಹೇಗೆ ಬೇಕಾದರೂ ನಿಮ್ಮ ಹೊಲಗಳಿಗೆ ಹೋಗಿರಿ.) (ಅಲ್ ಬಕರಃ 223)

ಪ್ರವಾದಿ(ಸ) ಹೇಳಿದರು- ಹಿಂದಿನಿಂದಾಗಲೀ ಮುಂದಿನಿಂದಾಗಲೀ ಸಂಸರ್ಗ ನಡೆಸಿರಿ. ಆದರೆ ಗುದದ್ವಾರದ ಮೂಲಕವಾಗಲೀ ಮುಟ್ಟಿನ ಸಂದರ್ಭದಲ್ಲಾಗಲೀ ಸಂಸರ್ಗ ನಡೆಸದಿರಿ. (ನಸಾಈ, ತಿರ್ಮಿದಿ, ತಬ್ರಾನಿ)

2. ಹ. ಖುಝೈಮ ಬಿನ್ ಸಾಬಿತ್(ರ) ಉಲ್ಲೇಖಿಸಿರುವ ಸುದೀರ್ಘ ಹದೀಸೊಂದರ ಕೊನೆಯಲ್ಲಿ ಪ್ರವಾದಿ(ಸ) ಹೀಗೆ ಹೇಳಿದ್ದಾರೆ- ಸ್ತ್ರೀಯರ ಹಿಂಭಾಗದಿಂದ ಸಂಸರ್ಗ ನಡೆಸದಿರಿ. **(ಬೈಹಕಿ, ತಹಾವಿ, ನಸಾಈ)**

3. ಯಾರು ತನ್ನ ಪತ್ನಿಯ ಗುದದ್ವಾರದ ಮೂಲಕ ಸಂಸರ್ಗ ನಡೆಸುತ್ತಾನೋ ಅವನ ಮೇಲೆ ಅಲ್ಲಾಹನು ತನ್ನ ಕೃಪಾದೃಷ್ಟಿ ಬೀರಲಾರ. **(ನಸಾಈ, ತಿರ್ಮಿದಿ)**

4. ಯಾರು ತಮ್ಮ ಪತ್ನಿಯರ ಗುದದ್ವಾರದ ಮೂಲಕ ಸಂಸರ್ಗ ನಡೆಸುವರೋ ಅವರು ಶಪಿತರು. **(ಅಬೂದಾವೂದ್, ಅಹ್ಮದ್)**

## ಮುಟ್ಟಾದಾಗ

ಇದನ್ನು ಪವಿತ್ರ ಕುರ್‌ಆನಿನ ಒಂದು ಸೂಕ್ತದಲ್ಲಿ ವಿವರಿಸಲಾಗಿದೆ. ಅದರ ಅನುವಾದ ಹೀಗಿದೆ:

**"ಆರ್ತವ(ಋತುಸ್ರಾವ)ದ ಕುರಿತು ಇವರು ನಿಮ್ಮೊಡನೆ ಕೇಳುತ್ತಾರೆ. ಹೇಳಿರಿ! ಅದೊಂದು ಮಲಿನಾವಸ್ಥೆ. ಆರ್ತವದ ಕಾಲದಲ್ಲಿ (ಮುಟ್ಟಾದಾಗ) ಸ್ತ್ರೀಯರಿಂದ ದೂರವಿರಿ. ಅವರು ಶುದ್ಧರಾಗುವ ವರೆಗೆ ಅವರನ್ನು ಸಮೀಪಿಸದಿರಿ. ಅವರು ಶುದ್ಧವಾದ ಬಳಿಕ ನಿಮಗೆ ಅಲ್ಲಾಹನು ವಿಧಿಸಿದ ಪ್ರಕಾರ ಅವರ ಬಳಿಗೆ ಹೋಗಿರಿ. ನಿಶ್ಚಯ ವಾಗಿಯೂ ಪಾಪಗಳಿಂದ ಪಶ್ಚಾತ್ತಾಪ ಪಡುವವರನ್ನೂ ಪಾವಿತ್ರ್ಯತೆ ಕೈಗೊಳ್ಳುವವರನ್ನೂ ಅಲ್ಲಾಹನು ಮೆಚ್ಚುತ್ತಾನೆ." (ಅಲ್ ಬಕರಃ 222)**

1. ಯಾರು ತನ್ನ ಪತ್ನಿಯೊಂದಿಗೆ ಆರ್ತವ ಕಾಲದಲ್ಲಿ ಸಂಸರ್ಗ ನಡೆಸುವನೋ, ಅಥವಾ ಆಕೆಯ ಗುದದಲ್ಲಿ ಸಂಸರ್ಗ ನಡೆಸುವನೋ ಅಥವಾ ಕಣಿ ಹೇಳುವವನ ಬಳಿ ಹೋಗಿ ಅವನು ಹೇಳುವುದನ್ನು ನಂಬುವನೋ ಅವನು ಮುಹಮ್ಮದ್‌ರ(ಸ) ಮೇಲೆ ಅವತೀರ್ಣಗೊಂಡುದ್ದನ್ನು ನಿರಾಕರಿಸಿದನು.

**(ಅಬೂದಾವೂದ್, ತಿರ್ಮಿದಿ, ಇಬ್ನುಮಾಜಃ)**

2. ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ,

ಯಹೂದಿಯರು ತಮ್ಮ ಸ್ತ್ರೀಯರನ್ನು ಆರ್ತವದ ಕಾಲದಲ್ಲಿ ಮನೆಯಿಂದ ಹೊರಹಾಕುತ್ತಿದ್ದರು. ಅವರೊಂದಿಗೆ ಊಟ ಮಾಡುವುದನ್ನೂ ಅವರೊಂದಿಗೆ ಒಡನಾಡುವುದನ್ನೂ ತೊರೆಯುತ್ತಿದ್ದರು. ಪ್ರವಾದಿವರ್ಯರೊಡನೆ(ಸ) ಈ ಕುರಿತು ಕೇಳಿದಾಗ ಅಲ್‌ಬಕರಃ ಅಧ್ಯಾಯದ ಪ್ರಸ್ತುತ ಸೂಕ್ತ ಅವತೀರ್ಣಗೊಂಡಿತು. ಪ್ರವಾದಿ(ಸ) ಅದನ್ನು ವಿವರಿಸುತ್ತಾ ಹೀಗೆಂದರು: ನೀವು ಅವರೊಂದಿಗೆ ಮನೆಯಲ್ಲಿರಿ. ಅವರೊಂದಿಗೆ ಎಲ್ಲವನ್ನೂ ಮಾಡಿರಿ. ಆದರೆ ಸಂಸರ್ಗ ಮಾತ್ರ ನಡೆಸದಿರಿ. **(ಮುಸ್ಲಿಮ್, ಅಬೂದಾವೂದ್)**

ಅವರೊಂದಿಗೆ ಊಟ ಮಾಡುವುದು, ಒಂದೇ ಹಾಸಿಗೆಯಲ್ಲಿ ಮಲಗುವುದು ಎಲ್ಲವೂ ಸಮ್ಮತ. ಆದರೆ ಸಂಭೋಗ ಮಾತ್ರ ಮಾಡಬಾರದು.

## ಆರ್ತವ ಕಾಲದ ಸಂಭೋಗಕ್ಕೆ ಪರಿಹಾರ

ಒಂದು ವೇಳೆ ಯಾರಾದರೂ ವಿಷಯಾಸಕ್ತಿಯನ್ನು ತಡೆಯಲಾಗದೆ ಈ ಪಾಪ ಕಾರ್ಯವನ್ನು ಮಾಡಿಬಿಟ್ಟರೆ ಅವನು ಒಂದು ದೀನಾರ್ ಅಥವಾ ½ ದೀನಾರ್ (ಚಿನ್ನದ ನಾಣ್ಯ) ದಾನ ಮಾಡಬೇಕು. (ಅಸ್ಹಾಬುಸ್ಸುನನ್, ತಬ್ರಾನಿ)

ಇಮಾಮ್ ಅಬೂಹನೀಫಾ, ಮಾಲಿಕ್ ಮತ್ತು ಶಾಫಿಈಯವರ(ರ) ಪ್ರಕಾರ ಪರಿಹಾರ ಧನ ಕಡ್ಡಾಯವಲ್ಲ. ಅವರು ಇಸ್ತಿಗ್‌ಫಾರ್ (ಪಶ್ಚಾತ್ತಾಪಪಟ್ಟು ಕ್ಷಮಾಪಣೆ ಮಾಡುವುದು) ಮಾಡಬೇಕಾದುದು ಕಡ್ಡಾಯ. ಇಮಾಮ್ ಅಹ್ಮದ್ ಬಿನ್ ಹಂಬಲ್(ರ) ಅವರು, "ಪರಿಹಾರ ನೀಡಬೇಕು; ಒಂದು ದೀನಾರ್ ದಾನ ಮಾಡಲಾಗದಿದ್ದರೆ ಅರ್ಧ ದೀನಾರ್ ನೀಡಬೇಕು" ಎನ್ನುತ್ತಾರೆ.

## ಮುಟ್ಟಿನ ರಕ್ತ ನಿಂತ ನಂತರ

ಮುಟ್ಟಿನ ರಕ್ತ ನಿಂತ ನಂತರ ಸ್ತ್ರೀಯು ತನ್ನ ಯೋನಿಯನ್ನು ತೊಳೆದುಬಿಟ್ಟರೆ, ವುಝೂ ಮಾಡಿದರೆ ಅಥವಾ ಸ್ನಾನ ಮಾಡಿದರೆ ಆಕೆಯೊಂದಿಗೆ ಸಂಭೋಗ ನಡೆಸ ಬಹುದು. ಏಕೆಂದರೆ ಕುರ್‌ಆನಿನಲ್ಲಿ ತಹಾರತ್ (ಶುದ್ಧಿ) ಎಂಬ ಪದ ಬಳಸಲಾಗಿದೆ. ಈ ಪದವು ಮೂರೂ ಅವಸ್ಥೆಗಳಿಗೆ ಅನ್ವಯವಾಗುತ್ತದೆ.*

## ಎರಡು ಸಂಭೋಗಗಳ ಮಧ್ಯೆ ಸ್ನಾನ ಅಥವಾ ವುಝೂ

ಪ್ರವಾದಿ(ಸ) ಅವರು ಎರಡು ಸಂಭೋಗಗಳ ಮಧ್ಯೆ ಸ್ನಾನ ಮಾಡಿದ್ದಾರೆ. ಅಬೂ ರಾಫಿಅ್(ರ) ಹೀಗೆ ಉಲ್ಲೇಖಿಸುತ್ತಾರೆ- ಪ್ರವಾದಿ(ಸ) ಅವರು ಒಂದು ದಿನ ತಮ್ಮ ಪತ್ನಿಯರನ್ನು ಸಮೀಪಿಸಿದರು ಮತ್ತು ಪ್ರತಿಯೊಬ್ಬಳ ಮನೆಯಲ್ಲೂ ಸ್ನಾನ ಮಾಡಿದರು. ನಾನು ಕೇಳಿದೆ- ಪ್ರವಾದಿವರ್ಯರೇ! ತಾವು ಪ್ರತಿಯೊಬ್ಬ ಪತ್ನಿಯ ಮನೆಯಲ್ಲೂ

---

* ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಇಮಾಮ್ ಮಾಲಿಕ್, ಶಾಫಿಈ ಮತ್ತು ಅಹ್ಮದ್‌ರ(ರ) ಪ್ರಕಾರ ಸ್ತ್ರೀ ಸ್ನಾನ ಮಾಡುವ ವರೆಗೆ ಅಥವಾ ಕಾರಣಾಂತರದಿಂದ ಸ್ನಾನ ಮಾಡಲಾಗದಿದ್ದು, ತಯಮ್ಮುಮ್ ಮಾಡುವ ವರೆಗೆ ಆಕೆಯೊಂದಿಗೆ ಸಂಭೋಗ ಧರ್ಮಸಮ್ಮತವಲ್ಲ. ಇಮಾಮ್ ಅಬೂಹನೀಫಾರ(ರ) ಅಭಿಪ್ರಾಯದಲ್ಲಿ ಆರ್ತವದ ಕನಿಷ್ಠ ಅವಧಿ 3 ದಿನಗಳು ಮತ್ತು ಗರಿಷ್ಠ ಅವಧಿ 10 ದಿನಗಳು. ಹತ್ತಕ್ಕಿಂತ ಕಡಿಮೆ ದಿನಗಳಲ್ಲಿ ರಕ್ತ ನಿಂತು ಸ್ತ್ರೀ ಸ್ನಾನ ಮಾಡಿದರೆ ಅಥವಾ ಒಂದು ಫರ್ಝ್ ನಮಾಝ್‌ನ ಸಮಯ ಕಳೆದರೆ ಆಕೆಯೊಂದಿಗೆ ಸಂಭೋಗ ನಡೆಸಬಹುದು. ಇನ್ನು ಹತ್ತು ದಿನಗಳ ನಂತರ ರಕ್ತ ನಿಂತರೆ ಸ್ನಾನಕ್ಕಿಂತ ಮುಂಚೆಯೇ ಆಕೆಯನ್ನು ಸಂಭೋಗಿಸಬಹುದು. ಆದರೆ ಸ್ನಾನ ಮಾಡಿದ ನಂತರವೇ ಸಂಸರ್ಗ ನಡೆಸುವುದು ಉತ್ತಮ.

ಪ್ರತ್ಯಪ್ರತ್ಯೇಕ ಸ್ನಾನ ಮಾಡಿದ್ದೇಕೆ? ಒಂದು ಬಾರಿ ಸ್ನಾನ ಮಾಡಿದ್ದರೆ ಸಾಕಾಗುತ್ತಿರಲಿಲ್ಲವೇ? ಪ್ರವಾದಿ ಹೇಳಿದರು- ನಾನು ಮಾಡಿದ್ದು ಉತ್ತಮವೂ ಪರಿಶುದ್ಧವೂ ಆಗಿದೆ.

(ಅಬೂದಾವೂದ್, ನಸಾಈ)

ಇದರಿಂದ ತಿಳಿದು ಬರುವುದೇನೆಂದರೆ ಒಬ್ಬನು ತನ್ನ ಪತ್ನಿಯನ್ನು ಸಂಭೋಗಿಸಿದ ನಂತರ ಇನ್ನೊಮ್ಮೆ ಸಮೀಪಿಸಬೇಕೆಂದು ಬಯಸಿದರೆ ಅದರ ಮಧ್ಯೆ ಸ್ನಾನ ಮಾಡುವುದು ಉತ್ತಮ. ಎರಡು ಸಂಭೋಗಗಳ ಮಧ್ಯೆ ವುಝೂ ಮಾಡಬೇಕೆಂದು ಪ್ರವಾದಿ(ಸ) ಸಹಾಬಿಗಳಿಗೆ ಆದೇಶಿಸಿದ್ದಾರೆ.

ನಿಮ್ಮಲ್ಲಿ ಯಾರಾದರೂ ತನ್ನ ಪತ್ನಿಯೊಂದಿಗೆ ಸಂಸರ್ಗ ನಡೆಸಿ ಇನ್ನೊಮ್ಮೆ ಹಾಗೆ ಮಾಡಬೇಕೆಂದು ಬಯಸಿದರೆ ಮಧ್ಯದಲ್ಲಿ ವುಝೂ ಮಾಡಿಕೊಳ್ಳಲಿ.

(ಮುಸ್ಲಿಮ್, ಅಬೂದಾವೂದ್)

## ಪತಿ-ಪತ್ನಿಯರು ಒಂದೇ ಕಡೆ ಸ್ನಾನ ಮಾಡುವುದು

ಈಗ ಮುಸ್ಲಿಮ್ ಸಮಾಜದಲ್ಲಿ ಲಜ್ಜೆ-ನಾಚಿಕೆಯ ಕಲ್ಪನೆಯೇ ಬದಲಾಗಿ ಬಿಟ್ಟಿದೆ. ಈ ಕಾಲದಲ್ಲಿ ಪತಿ-ಪತ್ನಿಯರು ಒಂದೇ ಸ್ಥಳದಲ್ಲಿ ಒಟ್ಟಿಗೆ ಸ್ನಾನ ಮಾಡುವುದು ಲಜ್ಜಾಸ್ಪದವೆಂದು ಭಾವಿಸಲಾಗುತ್ತದೆ. ಆದರೆ ಸಭ್ಯರಲ್ಲಿ ಶ್ರೇಷ್ಠರಾದ ಪ್ರವಾದಿ(ಸ) ಅದನ್ನು ನಿರ್ಲಜ್ಜೆಯ ಕಾರ್ಯವೆಂದು ಭಾವಿಸುತ್ತಿರಲಿಲ್ಲ. ಹ. ಆಯಿಶಾ(ರ) ಹೀಗೆನ್ನುತ್ತಾರೆ- ನಾನು ಮತ್ತು ಪ್ರವಾದಿ(ಸ) ಒಂದು ಪಾತ್ರೆಯಲ್ಲಿ ಒಟ್ಟಿಗೆ ಸ್ನಾನ ಮಾಡುತ್ತಿದ್ದೆವು. ಅವರು ಬೇಗಬೇಗ ನೀರು ತೆಗೆಯ ತೊಡಗಿದಾಗ ನಾನು, ನನಗೂ ಬಿಡಿರಿ, ನನಗೂ ಬಿಡಿರಿ ಎಂದು ಹೇಳುತ್ತಿದ್ದೆ.

(ಬುಖಾರಿ, ಮುಸ್ಲಿಮ್)

## ಜನಾಬತ್‌ನ ಸ್ಥಿತಿಯಲ್ಲಿ ಮಲಗುವುದಕ್ಕಿಂತ ಮುಂಚೆ ವುಝೂ ಅಥವಾ ತಯಮ್ಮುಮ್ ಮಾಡುವುದು

ಜನಾಬತ್ ಸ್ಥಿತಿಯಲ್ಲಿ ಮಲಗುವುದಕ್ಕಿಂತ ಮುಂಚೆ ವುಝೂ ಮಾಡಿಕೊಳ್ಳುವುದು ಉತ್ತಮ. ಪ್ರವಾದಿ(ಸ) ಕೆಲವೊಮ್ಮೆ ವಝೂ ಮಾಡಿ ಮಲಗುತ್ತಿದ್ದರು. ಇನ್ನು ಕೆಲವೊಮ್ಮೆ ವುಝೂ ಮಾಡದೆಯೇ ಮಲಗುತ್ತಿದ್ದರು. ಹ. ಆಯಿಶಾ(ರ) ಹೇಳುತ್ತಾರೆ- ಜನಾಬತ್‌ನ ಸ್ಥಿತಿಯಲ್ಲಿ ಪ್ರವಾದಿ(ಸ) ಮಲಗಲಿಚ್ಛಿಸಿದಾಗ ತಮ್ಮ ದೇಹದ ಮುಂಭಾಗ(ಗುಪ್ತಾಂಗ)ವನ್ನು ತೊಳೆದು, ನಮಾಝ್‌ಗಾಗಿ ವುಝೂ ಮಾಡುವಂತೆ ವುಝೂ ಮಾಡುತ್ತಿದ್ದರು.

(ಬುಖಾರಿ, ಮುಸ್ಲಿಮ್)

ಹ. ಆಯಿಶಾ(ರ)ರಿಂದಲೇ ವರದಿಯಾದ ಇನ್ನೊಂದು ಹದೀಸ್‌ನಲ್ಲಿ ಅವರು ಹೇಳುತ್ತಾರೆ- ಪ್ರವಾದಿ(ಸ) ಜನಾಬತ್‌ನ ಸ್ಥಿತಿಯಲ್ಲಿ ವುಝೂ ಮಾಡದೆಯೇ ಮಲಗುತ್ತಿದ್ದರು. ತರುವಾಯ ನಿದ್ರೆಯಿಂದೆದ್ದು ಸ್ನಾನ ಮಾಡುತ್ತಿದ್ದರು.

(ಅಬೂದಾವೂದ್, ತಿರ್ಮಿದಿ, ಇಬ್ನುಮಾಜಃ)

ಒಮ್ಮೆ ಹ. ಅಬ್ದುಲ್ಲಾ ಬಿನ್ ಉಮರ್(ರ) ಅವರು ಪ್ರವಾದಿ(ಸ) ಅವರಲ್ಲಿ ಹೀಗೆ ಕೇಳಿದರು- ಪ್ರವಾದಿವರ್ಯರೇ! ಜನಾಬತ್‌ನ ಸ್ಥಿತಿಯಲ್ಲಿ ನಾವು ನಿದ್ರಿಸಬಹುದೇ? ಪ್ರವಾದಿ(ಸ) ಹೇಳಿದರು- ವುಝೂ ಮಾಡಿಕೊಂಡು ನಿದ್ರಿಸಬಹುದು. ಇನ್ನೊಂದು ವರದಿ ಪ್ರಕಾರ ಪ್ರವಾದಿವರ್ಯರ ಉತ್ತರ ಹೀಗಿತ್ತು- ನಿದ್ರಿಸಬಹುದು. ಬೇಕಾದರೆ ವುಝೂ ಮಾಡಿಕೊಳ್ಳಲೂಬಹುದು. (ಅಬೂದಾವೂದ್, ಮುಸ್ಲಿಮ್)

ಹ. ಆಯಿಶಾರೇ(ರ) ವರದಿ ಮಾಡಿದ ಇನ್ನೊಂದು ಹದೀಸ್‌ನಿಂದ, ಪ್ರವಾದಿ(ಸ) ಅವರು ಜನಾಬತ್‌ನ ಸ್ಥಿತಿಯಲ್ಲಿ ಮಲಗುವುದಕ್ಕಿಂತ ಮುಂಚೆ ಸ್ನಾನ ಮಾಡದಿದ್ದರೆ ವುಝೂ ಮಾಡಿಕೊಳ್ಳುತ್ತಿದ್ದರು ಎಂದು ತಿಳಿದು ಬರುತ್ತದೆ.

ಅಬ್ದುಲ್ಲಾ ಬಿನ್ ಕೈಸ್(ರ) ಹೇಳುತ್ತಾರೆ- ನಾನು ಹ. ಆಯಿಶಾರಲ್ಲಿ, ಪ್ರವಾದಿ(ಸ) ಅವರು ಮಲಗುವುದಕ್ಕಿಂತ ಮುಂಚೆ ಸ್ನಾನ ಮಾಡುತ್ತಿದ್ದರೇ ಅಥವಾ ಸ್ನಾನಕ್ಕಿಂತ ಮುಂಚೆ ಮಲಗುತ್ತಿದ್ದರೇ ಎಂದು ಕೇಳಿದೆ. ಅವರು ಹೇಳಿದರು- ಹೆಚ್ಚಾಗಿ ಅವರು ಸ್ನಾನ ಮಾಡಿ ಮಲಗುತ್ತಿದ್ದರು. ಕೆಲವೊಮ್ಮೆ ವುಝೂ ಮಾಡಿ ಮಲಗುತ್ತಿದ್ದರು. ಆಗ ನಾನು ಕೇಳಿದೆ- ಅಲ್‌ಹಮ್ದುಲಿಲ್ಲಾಹ್. ಈ ವಿಷಯದಲ್ಲಿ ವೈಶಾಲ್ಯವಿದೆ. (ಮುಸ್ಲಿಮ್, ಅಹ್ಮದ್)

ಕೆಲವೊಮ್ಮೆ ವುಝೂವಿನ ಬದಲಿಗೆ ತಯಮ್ಮುಮ್ ಮಾಡಿಕೊಳ್ಳ ಬಹುದಾಗಿದೆ. ಪ್ರವಾದಿಯವರು(ಸ) ಜನಾಬತ್‌ನ ಸ್ಥಿತಿಯಲ್ಲಿ ಮಲಗುವುದಕ್ಕಿಂತ ಮುಂಚೆ ವುಝೂ ಅಥವಾ ತಯಮ್ಮುಮ್ ಮಾಡಿಕೊಳ್ಳುತ್ತಿದ್ದರೆಂದು ಹ. ಆಯಿಶಾರು(ರ) ವರದಿ ಮಾಡಿದ್ದಾರೆ. (ಬೈಹಕಿ)

## ಸಂಸರ್ಗ ಮತ್ತು ಪುಣ್ಯ

ಸತ್ಯವಿಶ್ವಾಸಿಯು ಅಲ್ಲಾಹನಿಗೆ ವಿಧೇಯನಾಗಿ ಜೀವನ ಸಾಗಿಸುತ್ತಿದ್ದರೆ, ಶರೀಅತ್ ಪ್ರಕಾರ ಅವನ ಆಹಾರ ಸೇವನೆ, ನಿದ್ರೆ; ಮಾತ್ರವಲ್ಲ, ಅವನು ತನ್ನ ಪತ್ನಿಯನ್ನು ಸಮೀಪಿಸುವುದಕ್ಕೂ ಅವನಿಗೆ ಪುಣ್ಯ ಸಿಗುತ್ತದೆ.

ಪ್ರವಾದಿ(ಸ) ಹೇಳಿದರು- ನೀವು ನಿಮ್ಮ ಪತ್ನಿಯರನ್ನು ಸಮೀಪಿಸಿದರೆ ಅದಕ್ಕೂ ಪುಣ್ಯ ಸಿಗುತ್ತದೆ. ಆಗ ಸಹಾಬಿಗಳು ಹೀಗೆ ಕೇಳಿದರು- ಅಲ್ಲಾಹನ ಸಂದೇಶವಾಹಕರೇ! ನಮ್ಮ ಪೈಕಿ ಯಾರಾದರೂ ತನ್ನ ವಿಷಯಾಸಕ್ತಿಯನ್ನು ಪೂರೈಸಿದರೆ ಅದಕ್ಕೂ ಪುಣ್ಯ ಲಭಿಸುವುದೇ? ಪ್ರವಾದಿ(ಸ) ಸಹಾಬಿಗಳಿಗೆ ಮರುಪ್ರಶ್ನೆ ಹಾಕಿದರು- ನೀವು ನಿಮ್ಮ

ವಿಷಯಾಸಕ್ತಿಯನ್ನು ನಿಷಿದ್ಧ ಮಾರ್ಗದಿಂದ ಪೂರೈಸಿದರೆ ಅದು ಪಾಪವಾಗಲಾರದೆ? ಸಹಾಬಿಗಳು, ಆಗಬಹುದು ಎಂದರು. ಆಗ ಪ್ರವಾದಿ(ಸ) ಹೇಳಿದರು- ಅದೇ ರೀತಿಯಲ್ಲಿ ನೀವು ಧರ್ಮಸಮ್ಮತ ಮಾರ್ಗದಲ್ಲಿ ನಿಮ್ಮ ದೇಹೇಚ್ಛೆಯನ್ನು ಪೂರೈಸಿದರೆ ಅದಕ್ಕೆ ಖಂಡಿತ ಪುಣ್ಯ ಲಭಿಸುವುದು. (ಮುಸ್ಲಿಮ್, ಅಹ್ಮದ್, ನಸಾಈ)

## ಪ್ರಥಮ ರಾತ್ರಿ ಕಳೆದು ಬೆಳಿಗ್ಗೆ ಏನು ಮಾಡಬೇಕು?

ಅಂದು ಬೆಳಿಗ್ಗೆ ಮನೆಗೆ ಬಂದ ಸಂಬಂಧಿಕರಿಗೆ ಸಲಾಮ್ ಹೇಳುವುದು ಮತ್ತು ಅವರಿಗಾಗಿ ಪ್ರಾರ್ಥಿಸುವುದು ಅಪೇಕ್ಷಣೀಯವಾಗಿದೆ. ಅದೇ ರೀತಿ ಸಂಬಂಧಿಕರೂ ಅವನ ಸಲಾಮ್‌ಗೆ ಉತ್ತರ ನೀಡುವುದು ಮತ್ತು ಅವನಿಗಾಗಿ ಪ್ರಾರ್ಥಿಸುವುದು ಉತ್ತಮ.

ಹ. ಅನಸ್(ರ) ವರದಿ ಮಾಡುತ್ತಾರೆ- ಪ್ರವಾದಿ(ಸ) ಅವರು ಝೈನಬ್‌ರೊಂದಿಗೆ ಪ್ರಥಮ ರಾತ್ರಿ ಕಳೆದ ದಿನ ಸಹಾಬಿಗಳಿಗೆ ಮಾಂಸ ಮತ್ತು ರೊಟ್ಟಿ ಬಡಿಸಿ ವಲೀಮ ಮಾಡಿದರು. ತರುವಾಯ ತಮ್ಮ ಇತರ ಪತ್ನಿಯರ ಬಳಿಗೆ ಹೋಗಿ ಅವರಿಗೆ ಸಲಾಮ್ ಹೇಳಿದರು ಮತ್ತು ಅವರಿಗಾಗಿ ಪ್ರಾರ್ಥಿಸಿದರು. ಅವರ ಪತ್ನಿಯರೂ ಪ್ರತಿ ಸಲಾಮ್ ಹೇಳಿದರು ಮತ್ತು ಅವರಿಗಾಗಿ ಪ್ರಾರ್ಥಿಸಿದರು. ಪ್ರವಾದಿ(ಸ) ಅವರು ಪ್ರಥಮ ರಾತ್ರಿ ಕಳೆದ ದಿನ ಹೀಗೆಯೇ ಮಾಡುತ್ತಿದ್ದರು. (ನಸಾಈ, ಇಬ್ನುಸಅದ್)

## ರಹಸ್ಯದ ವಿಷಯಗಳನ್ನು ಬಹಿರಂಗಪಡಿಸಬಾರದು

ಸಂಸರ್ಗದ ರಹಸ್ಯ ವಿಷಯಗಳನ್ನು ಬಹಿರಂಗಪಡಿಸುವುದು ಪತಿ-ಪತ್ನಿಯರಿಬ್ಬರಿಗೂ ಹರಾಮ್ ಆಗಿದೆ. ಹಾಗೆ ಮಾಡುವುದು ಅಜ್ಞಾನಜನ್ಯ ನಿರ್ಲಜ್ಜ ಕಾರ್ಯವಾಗಿದೆ. ಈ ಬಗ್ಗೆ ಎರಡು ಹದೀಸ್‌ಗಳಿವೆ.

1. ಪ್ರವಾದಿ(ಸ) ಹೇಳಿದರು- ತನ್ನ ಪತ್ನಿಯೊಂದಿಗೆ ಸಂಸರ್ಗ ನಡೆಸಿ ಆಕೆಯ ರಹಸ್ಯ ವಿಷಯಗಳನ್ನು ಇತರರ ಮುಂದೆ ಪ್ರಸ್ತಾಪಿಸುವವನು ನಿರ್ಣಾಯಕ ದಿನದಂದು ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ನೀಚರ ಸಾಲಿನಲ್ಲಿರುವನು.

(ಮುಸ್ಲಿಮ್, ಅಹ್ಮದ್, ಬೈಹಕಿ)

2. ಅಸ್ಮಾ ಬಿಂತ್ ಯಝೀದ್ ವರದಿ ಮಾಡುತ್ತಾರೆ- ನಾನು ಪ್ರವಾದಿ(ಸ) ಅವರ ಬಳಿಯಲ್ಲಿದ್ದೆ. ಇನ್ನೂ ಕೆಲವು ಸ್ತ್ರೀ-ಪುರುಷರು ಅಲ್ಲಿದ್ದರು. ಪ್ರವಾದಿ(ಸ) ಕೇಳಿದರು- ಪುರುಷರ ಪೈಕಿ ಯಾರಾದರೂ ತನ್ನ ಪತ್ನಿಯೊಂದಿಗೆ ಸಂಭೋಗಿಸಿದ ವಿಷಯವನ್ನು ಇತರ ಪುರುಷರೊಂದಿಗೆ ಪ್ರಸ್ತಾಪಿಸುತ್ತಾರೆಯೋ? ಮತ್ತು ಸ್ತ್ರೀಯರು ಅಂತಹ ವಿಷಯಗಳನ್ನು ಇತರ ಸ್ತ್ರೀಯರ ಮುಂದೆ ಪ್ರಸ್ತಾಪಿಸುತ್ತಾರೆಯೇ? ಪ್ರವಾದಿವರ್ಯರ(ಸ) ಈ ಪ್ರಶ್ನೆ ಕೇಳಿ ಎಲ್ಲರೂ ಮೌನವಾದರು. ಅವರ ಮೌನವನ್ನು ಮುರಿದು ನಾನೇ ಹೇಳಿದೆ- ಪ್ರವಾದಿವರ್ಯರೇ! ಅಲ್ಲಾಹನಾಣೆ! ಪುರುಷರೂ

ಪ್ರಸ್ತಾಪಿಸುತ್ತಾರೆ. ಸ್ತ್ರೀಯರೂ ಪ್ರಸ್ತಾಪಿಸುತ್ತಾರೆ. ಆಗ ಪ್ರವಾದಿ(ಸ) ಹೇಳಿದರು: ಹಾಗೆ ಮಾಡದಿರಿ. ಇದು ಒಂದು ಗಂಡು ಪಿಶಾಚಿಯು ಇನ್ನೊಂದು ಹೆಣ್ಣು ಪಿಶಾಚಿಯನ್ನು ದಾರಿ ಮಧ್ಯೆ ಸಂಧಿಸಿ, ಜನರ ಎದುರಲ್ಲೇ ಅದರೊಂದಿಗೆ ಸಂಭೋಗ ನಡೆಸುವಂತಹ ಕೃತ್ಯವಾಗಿದೆ. (ಅಹ್ಮದ್, ಅಬೂದಾವೂದ್, ಬೈಹಕಿ)

## ವಧೂ-ವರರಿಗಾಗಿ ಪ್ರಾರ್ಥಿಸುವುದು

ಒಬ್ಬ ವ್ಯಕ್ತಿಯು ತನಗೆ ಮದುವೆಯಾದ ವಿಷಯ ತಿಳಿಸಿದರೆ ಅಥವಾ ಯಾರಾದರೂ ಮದುವೆಯ ಸಮಯದಲ್ಲಿ ಉಪಸ್ಥಿತನಿದ್ದರೆ ಆಗ ವಧೂ ವರರಿಗಾಗಿ ಪ್ರಾರ್ಥಿಸಬೇಕು.

1. ಹ. ಜಾಬಿರ್ ಬಿನ್ ಅಬ್ದುಲ್ಲಾ(ರ) ತನ್ನ ಮದುವೆಯ ವಿಷಯವನ್ನು ಪ್ರವಾದಿ(ಸ) ಅವರಿಗೆ ತಿಳಿಸಿದಾಗ ಅವರು

بَارَكَ اللّٰهُ لَكَ "ಬಾರಕಲ್ಲಾಹು ಲಕ"

(ಅಲ್ಲಾಹನು ನಿಮಗೆ ಸಮೃದ್ಧಿ ನೀಡಲಿ) ಎಂದು ಪ್ರಾರ್ಥಿಸಿದರು.

(ಬುಖಾರಿ, ಮುಸ್ಲಿಮ್)

2. ಹ. ಫಾತಿಮಾರೊಂದಿಗೆ(ರ) ಹ. ಅಲೀ(ರ) ಅವರ ವಿವಾಹವಾದಾಗ ಪ್ರವಾದಿ(ಸ) ಅವರು ಪ್ರಥಮ ರಾತ್ರಿಯಂದು ಹ. ಅಲೀಯವರ ಮನೆಗೆ ಹೋದರು. ಅಲ್ಲಿ ನೀರು ತರಿಸಿ ವುಝೂ ಮಾಡಿದರು ಮತ್ತು ವುಝೂವಿನ ನೀರನ್ನು ಹ. ಅಲೀಯವರ ಮೇಲೆ ಸಿಂಪಡಿಸಿ ಈ ರೀತಿ ಪ್ರಾರ್ಥಿಸಿದರು-

اَللّٰهُمَّ بَارِكْ فِيهِمَا وَبَارِكْ لَهُمَا فِي بِنَائِهِمَا

"ಅಲ್ಲಾಹುಮ್ಮ ಬಾರಿಕ್ ಫೀಹಿಮಾ ವಬಾರಿಕ್ ಲಹುಮಾ ಫೀ ಬಿನಾಇಹಿಮಾ."

(ಅಲ್ಲಾಹನೇ! ಇವರ ಸಂಬಂಧದಲ್ಲಿ ಸಮೃದ್ಧಿಯುಂಟು ಮಾಡು. ಇವರ ಪ್ರಥಮ ರಾತ್ರಿಯನ್ನು ಇವರ ಪಾಲಿಗೆ ಮಂಗಳದಾಯಕಗೊಳಿಸು.)

(ಇಬ್ನುಸಅದ್, ತಬ್ರಾನಿ, ಇಬ್ನು ಅಸಾಕರ್)

3. ಹ. ಆಯಿಶಾ(ರ) ತಮ್ಮ ಪ್ರಥಮ ರಾತ್ರಿಯ ವೃತ್ತಾಂತವನ್ನು ಹೀಗೆ ವಿವರಿಸುತ್ತಾರೆ- ನನ್ನ ತಾಯಿಯು ನನ್ನನ್ನು ಒಂದು ಕೋಣೆಗೆ ಕರೆದೊಯ್ದರು. ಅಲ್ಲಿ ಕೆಲವು ಅನ್ಸಾರಿ ಸ್ತ್ರೀಯರಿದ್ದರು. ಅವರು ನನ್ನನ್ನು ನೋಡಿ,

عَلَي الْخَيْرِ وَالْبَرَكَةِ وَعَلَي خَيْرِ طَائِرِ

"ಅಲಲ್ ಖೈರಿ ವಲ್‌ಬರಕತಿ ವಅಲಾ ಖೈರಿ ತಾಇರಿ."

(ಒಳಿತು ಮತ್ತು ಸಮೃದ್ಧಿ ಹಾಗೂ ಒಳ್ಳೆಯ ಅದೃಷ್ಟಕ್ಕಾಗಿ.)

(ಬುಖಾರಿ, ಮುಸ್ಲಿಮ್)

4. ಹ. ಅಬೂ ಹುರೈರಾ ವರದಿ ಮಾಡುತ್ತಾರೆ- ಯಾರಾದರೂ ಮದುವೆ ಮಾಡಿಕೊಂಡರೆ ಪ್ರವಾದಿ(ಸ) ಅವರು ಆ ವ್ಯಕ್ತಿಗಾಗಿ ಈ ರೀತಿ ಪ್ರಾರ್ಥಿಸಿ ಶುಭ ಕೋರುತ್ತಿದ್ದರು-

بَارَكَ اللّٰهُ لَكَ وَبَارَكَ اللّٰهُ عَلَيْكَ وَجَمَعَ بَيْنَكُمَا عَلَي خَيْرٍ

"ಬಾರಕಲ್ಲಾಹು ಲಕ ವಬಾರಕಲ್ಲಾಹು ಅಲೈಕ ವಜಮಅ ಬೈನಕುಮಾ ಅಲಾ ಖೈರಿನ್."

(ಅಲ್ಲಾಹನು ನಿನಗೆ ಸಮೃದ್ಧಿ ನೀಡಲಿ, ನಿನ್ನಿಂದಾಗಿ ಸಮೃದ್ಧಿ ನೀಡಲಿ ಮತ್ತು ನಿಮ್ಮಿಬ್ಬರನ್ನು ಒಳಿತಿನಲ್ಲಿ ಜೋಡಿಸಿಡಲಿ)

(ಅಬೂದಾವೂದ್, ತಿರ್ಮಿದಿ, ಇಬ್ನುಮಾಜಃ ಅಹ್ಮದ್)

## ವಲೀಮ ಕಡ್ಡಾಯ

ಪ್ರಥಮ ರಾತ್ರಿ ಕಳೆದ ನಂತರ ವಲೀಮ ಮಾಡಬೇಕು. ಪ್ರವಾದಿ(ಸ) ಅವರು ಹ. ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರಿಗೆ ಇದನ್ನು ಆದೇಶಿಸಿದ್ದರು.

1. ಹ. ಅನಸ್(ರ) ಹೀಗೆ ವರದಿ ಮಾಡುತ್ತಾರೆ-

ಅಬ್ದುರ್ರಹ್ಮಾನ್ ಬಿನ್ ಔಫ್(ರ) ಮಕ್ಕಾದಿಂದ ಹಿಜ್ರತ್ ಮಾಡಿ ಮದೀನಕ್ಕೆ ಬಂದಾಗ ಪ್ರವಾದಿ(ಸ) ಅವರು, ಅವರ ಮತ್ತು ಸಅದ್ ಬಿನ್ ರಬೀಅ್ ಅನ್ಸಾರಿಯವರ ಮಧ್ಯೆ ಸಹೋದರ ಸಂಬಂಧ ಏರ್ಪಡಿಸಿದರು. ಸಅದ್ ಬಿನ್ ರಬೀಅರು ಅವರನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಊಟ ತರಿಸಿ ಇಬ್ಬರೂ ಉಂಡರು. ತರುವಾಯ ಸಅದ್ ಹೀಗೆಂದರು- ನನ್ನ ಸಹೋದರಾ! ಅನ್ಸಾರರ ಪೈಕಿ ನಾನು ಅತ್ಯಂತ ಸಂಪನ್ನ ವ್ಯಕ್ತಿಯಾಗಿದ್ದೇನೆ. ಈಗ ನನ್ನ ಸೊತ್ತನ್ನು ಲೆಕ್ಕ ಮಾಡಿ ಅರ್ಧ ತೆಗೆದುಕೊಳ್ಳಿ. ಇನ್ನೊಂದು ವರದಿಯಲ್ಲಿ ಹೀಗಿದೆ: ಅವರು ಹೇಳಿದರು- ಬನ್ನಿ, ನಮ್ಮ ತೋಟಕ್ಕೆ ಹೋಗೋಣ. ಅದನ್ನು ಸಮಪಾಲು ಮಾಡಿ ಹಂಚಿಕೊಳ್ಳೋಣ. ನನಗೆ ಇಬ್ಬರು ಪತ್ನಿಯರಿದ್ದಾರೆ. ನೀವು ನನ್ನ ಧರ್ಮ ಸಂಬಂಧಿ ಸಹೋದರ. ನಿಮಗೆ ಪತ್ನಿಯಿಲ್ಲ. ನನ್ನ ಇಬ್ಬರು ಪತ್ನಿಯರ ಪೈಕಿ ನೀವು ಯಾರನ್ನು ಇಷ್ಟಪಡುತ್ತೀರೋ ಅವಳಿಗೆ ನಾನು ನಿಮಗಾಗಿ ತಲಾಕ್ ನೀಡುತ್ತೇನೆ. ಇದ್ದತ್ ಅವಧಿ ಮುಗಿದ ಬಳಿಕ ನೀವು ವಿವಾಹ ಮಾಡಿಕೊಳ್ಳಬಹುದು. ಅಬ್ದುರ್ರಹ್ಮಾನ್

ಬಿನ್ ಔಫ್ ಹೀಗೆ ಉತ್ತರಿಸಿದರು- ಅಲ್ಲಾಹನಾಣೆ! ನನಗೆ ಅದೇನೂ ಬೇಡ. ಅಲ್ಲಾಹನು ನಿಮ್ಮ ಸೊತ್ತು ಸಂತಾನಗಳಲ್ಲಿ ಸಮೃದ್ಧಿಯುಂಟು ಮಾಡಲಿ. ನನಗೆ ಪೇಟೆಯ ದಾರಿ ತೋರಿಸಿದರೆ ಸಾಕು.

ಜನರು ಅವರಿಗೆ ಪೇಟೆಯ ದಾರಿ ತೋರಿಸಿದರು. ಅವರು ಪೇಟೆಗೆ ಹೋಗಿ ಸ್ವಲ್ಪ ಸಾಮಾನು ಖರೀದಿಸಿ ಮಾರಾಟ ಮಾಡಿದರು. ಸ್ವಲ್ಪ ಲಾಭ ದೊರೆಯಿತು. ಮರು ದಿವಸವೂ ಹಾಗೆಯೇ ಮಾಡಿದರು. ಈ ರೀತಿ ವ್ಯಾಪಾರವನ್ನು ಮುಂದು ವರಿಸಿದರು. ಒಂದು ದಿನ ಅವರು ಪ್ರವಾದಿ(ಸ) ಅವರ ಬಳಿ ಬಂದರು. ಆಗ ಅವರ ಬಟ್ಟೆಯಲ್ಲಿ ಕಸ್ತೂರಿಯ ಸುವಾಸನೆ ಬರುತ್ತಿತ್ತು. ಪ್ರವಾದಿ(ಸ), ಇದೇನು ಸುವಾಸನೆ? ಎಂದು ಕೇಳಿದರು. ಅವರು ಹೇಳಿದರು- ಅಲ್ಲಾಹನ ಸಂದೇಶವಾಹಕರೆ! ನಾನೋರ್ವ ಅನ್ಸಾರಿ ಮಹಿಳೆಯನ್ನು ಮದುವೆಯಾಗಿದ್ದೇನೆ. "ಎಷ್ಟು ಮೆಹರ್ ನೀಡಿದಿರಿ" ಎಂದು ಪ್ರವಾದಿವರ್ಯರು(ಸ) ಕೇಳಿದರು- 'ಖರ್ಜೂರದ ಬೀಜದಷ್ಟು ಚಿನ್ನ' ಎಂದಾಗ ಪ್ರವಾದಿ(ಸ) ಹೇಳಿದರು- ಅಲ್ಲಾಹನು ನಿಮಗೆ ಸಮೃದ್ಧಿ ನೀಡಲಿ. ವಲೀಮ ಮಾಡಿರಿ. ಒಂದು ಆಡಿನ ಮಾಂಸದಿಂದಲಾದರೂ ಸರಿ. ಅಬ್ದುರ್ರಹ್ಮಾನ್ ಬಿನ್ ಔಫ್ ಹೇಳುತ್ತಾರೆ- ನನ್ನ ಸ್ಥಿತಿಯೇನಾಗಿತ್ತೆಂದರೆ ನಾನು ಒಂದು ಕಲ್ಲನ್ನೆತ್ತಿದರೂ ಅದರ ಕೆಳಗೆ ಚಿನ್ನ ಅಥವಾ ಬೆಳ್ಳಿಯಿರಬಹುದೆಂದು ನಿರೀಕ್ಷಿಸಿದ್ದೆ. (ಇದು ವ್ಯಾಪಾರದಲ್ಲಿ ಅತ್ಯಂತ ಸಮೃದ್ಧಿಯುಂಟಾಗಿರುವುದರ ಸೂಚನೆಯಾಗಿದೆ.)

ಹ. ಅನಸ್(ರ) ಹೇಳುತ್ತಾರೆ- ಅಬ್ದುರ್ರಹ್ಮಾನ್ ಬಿನ್ ಔಫ್ ನಿಧನರಾದಾಗ ಅವರ ಪತ್ನಿಯರ ಪೈಕಿ ಪ್ರತಿಯೊಬ್ಬಳಿಗೂ ಅವರ ವಾರೀಸಿನಲ್ಲಿ ತಲಾ ಒಂದು ಲಕ್ಷ ದೀನಾರ್ (ಚಿನ್ನದ ನಾಣ್ಯ) ಸಿಕ್ಕಿದುವು. (ಈ ಹದೀಸ್ ಪ್ರಸಿದ್ಧ 6 ಗ್ರಂಥಗಳಲ್ಲಲ್ಲದೆ ಇತರ ಹದೀಸ್ ಗ್ರಂಥಗಳಲ್ಲೂ ಇದೆ.)

2. ಬುರೈದಾ ಬಿನ್ ಹಸೀಬ್ ಅವರ ವರದಿ ಪ್ರಕಾರ ಹ. ಅಲೀ(ರ)ಯವರು ಫಾತಿಮಾರಿಗೆ ವಿವಾಹದ ಸಂದೇಶವನ್ನು ಕಳಿಸಿದಾಗ ಪ್ರವಾದಿ(ಸ) ಹೇಳಿದರು- ಪ್ರತಿಯೊಂದು ವಿವಾಹಕ್ಕೂ ಒಂದು ವಲೀಮ ಅಗತ್ಯ. (ಅಹ್ಮದ್, ತಹಾವೀ, ತಬ್ರಾನಿ)

ಒಂದು ವರದಿಯಂತೆ, ಹ. ಅಲೀಯವರ ವಿವಾಹವಾದಾಗ ಕೆಲವು ಅನ್ಸಾರ್‌ಗಳು ಒಂದು ಕುರಿ ಮತ್ತು ಕೆಲವು ಸೇರು ಜೋಳವನ್ನು ವಲೀಮ ಮಾಡಲಿಕ್ಕಾಗಿ ಹ. ಅಲೀಗೆ ನೀಡಿದರು.

ಹೆಚ್ಚಿನ ಕರ್ಮಶಾಸ್ತ್ರ ಪಂಡಿತರ ಪ್ರಕಾರ ವಲೀಮ ಸುನ್ನತ್ (ಐಚ್ಛಿಕ) ಆಗಿದೆ. ಕೆಲವರು ಅದನ್ನು ವಾಜಿಬ್ (ಕಡ್ಡಾಯ) ಎಂದು ಹೇಳಿದ್ದಾರೆ. ಶೇಖ್ ನಾಸಿರುದ್ದೀನ್ ಅಲ್ಬಾನಿಯವರು ಎರಡನೇ ಅಭಿಪ್ರಾಯಕ್ಕೆ ಪ್ರಾಶಸ್ತ್ಯ ನೀಡಿದ್ದಾರೆ.

## ವಲೀಮ: ರೊಟ್ಟಿ-ಮಾಂಸವೇ ನೀಡಬೇಕೆಂದಿಲ್ಲ

ಪ್ರವಾದಿ(ಸ) ಅವರ ಕಾಲದಲ್ಲಿ ಮುಸ್ಲಿಮರು ಹೆಚ್ಚಾಗಿ ಸಿರಿವಂತರಾಗಿರಲಿಲ್ಲ. ಆದುದರಿಂದ ಆ ಕಾಲದಲ್ಲಿ ರೊಟ್ಟಿ-ಮಾಂಸವು ಉತ್ತಮ ಹಾಗೂ ದುಬಾರಿ ಆಹಾರವೆಂದು ಪರಿಗಣಿಸಲಾಗುತ್ತಿತ್ತು. ಇಲ್ಲಿ ಹೇಳ ಬಯಸುವುದೇನೆಂದರೆ ವಲೀಮ ಸುನ್ನತ್ ಆಗಿದೆ. ಅದನ್ನು ಹಾಗೆಯೇ ಭಾವಿಸಬೇಕು. ಭಾರತೀಯ ಮುಸ್ಲಿಮರಲ್ಲಿ ಮದುವೆಯ ಔತಣವು ಪ್ರತಿಷ್ಠೆಯ ಪ್ರತೀಕವಾಗಿ ಪರಿಗಣಿಸಲ್ಪಡುತ್ತದೆ. ಅದರ ಪರಿಣಾಮವಾಗಿ, ಹೆಚ್ಚಿನವರು ಬಿರಿಯಾನಿ, ರೊಟ್ಟಿಮಾಂಸ ಹಾಗೂ ಅಂತಹ ಇತರ ಆಹಾರಗಳನ್ನು ನೀಡಲು ಸಾಧ್ಯವಾಗದೆ ವಲೀಮ ಮಾಡುವುದಿಲ್ಲ. ಅದಕ್ಕಿಂತ ಕಡಿಮೆ ದರ್ಜೆಯ ಔತಣಕೂಟವನ್ನು ತಮ್ಮ ಪ್ರತಿಷ್ಠೆಗೆ ಕುಂದೆಂದು ಭಾವಿಸುತ್ತಾರೆ. ಇಂತಹ ವಿಚಾರಗಳನ್ನು ಬದಲಿಸಬೇಕಾದ ಅಗತ್ಯವಿದೆ. ಬಿಸ್ಕಟ್ ಮತ್ತು ಚಹಾ ನೀಡಿಯೂ ವಲೀಮ ಮಾಡಬಹುದಾಗಿದೆ. ಅದರಿಂದ 'ಸುನ್ನತ್' ಪಾಲನೆಗೆ ಯಾವುದೇ ಅಡ್ಡಿಯಾಗುವುದಿಲ್ಲ. ಪ್ರವಾದಿ(ಸ) ಅವರು ಝೈನಬ್ ಬಿನ್ತಿ ಜಹಶ್‌ರೊಂದಿಗೆ ವಿವಾಹವಾದಾಗ ರೊಟ್ಟಿ ಮಾಂಸದಿಂದ ಸಹಾಬಿಗಳಿಗೆ ವಲೀಮದ ಊಟ ನೀಡಿದ್ದರು. ಆದರೆ ಇತರ ವಿವಾಹಗಳಲ್ಲಿ ಹಾಗೆ ಮಾಡಿರಲಿಲ್ಲ. ಒಮ್ಮೆ ತಮ್ಮ ಒಂದು ವಿವಾಹದಲ್ಲಿ ಪ್ರವಾದಿವರ್ಯರು ಅರ್ಧ ಸೇರು ಜೋಳದ ರೊಟ್ಟಿ ಮಾಡಿ ಬಡಿಸಿದ್ದರು.

1. ಹ. ಅನಸ್(ರ) ವರದಿ ಮಾಡುತ್ತಾರೆ,

ಝೈನಬ್‌ರ ವಿವಾಹದ ವೇಳೆ ಮಾಡಿದಂತಹ ವಲೀಮವನ್ನು ಪ್ರವಾದಿವರ್ಯರು ಇತರ ಯಾವ ಪತ್ನಿಯ ವಿವಾಹದಲ್ಲೂ ಮಾಡಿದ್ದನ್ನು ನಾನು ನೋಡಿಲ್ಲ. ಅವರು ಒಂದು ಆಡನ್ನು ದಿಬಹ್ ಮಾಡಿದರು. ಸಹಾಬಿಗಳಿಗೆ ಮಾಂಸ ರೊಟ್ಟಿಯ ಊಟ ಬಡಿಸಿದರು. (ಬುಖಾರಿ, ಮುಸ್ಲಿಮ್)

2. ಹ. ಅನಸ್ ಅವರೇ ಮಾಡಿದ ಇನ್ನೊಂದು ವರದಿ ಹೀಗಿದೆ- ಖೈಬರ್ ಮತ್ತು ಮದೀನದ ಮಧ್ಯೆ ಪ್ರವಾದಿ(ಸ) ಅವರು ಹ. ಸಫಿಯ್ಯ(ರ)ರೊಂದಿಗೆ ಪ್ರಥಮ ರಾತ್ರಿ ಕಳೆದರು. ಬೆಳಿಗ್ಗೆ ಪ್ರವಾದಿ(ಸ) ಸಹಾಬಿಗಳಿಗೆ ಹೀಗೆ ಆಜ್ಞಾಪಿಸಿದರು- ಚರ್ಮದ ಹಾಸನ್ನು ಹಾಸಿರಿ. ಯಾರ ಬಳಿ ಅವರ ಅಗತ್ಯಕ್ಕಿಂತ ಹೆಚ್ಚು ಆಹಾರವಿದೆಯೋ ಅದನ್ನು ತಂದು ಊಟದ ಹಾಸಿನಲ್ಲಿ ಹಾಕಿರಿ. ಸಹಾಬಿಗಳು ತಮ್ಮ ಬಳಿಯಲ್ಲಿದ್ದ ಖರ್ಜೂರ, ಕೆನೆ ಮತ್ತು ತುಪ್ಪವನ್ನು ತಂದು ರಾಶಿ ಹಾಕಿದರು. ತರುವಾಯ ಅದನ್ನೇ ಒಟ್ಟು ಸೇರಿಸಿ ಎಲ್ಲರೂ ಹೊಟ್ಟೆ ತುಂಬಾ ತಿಂದರು. (ಬುಖಾರಿ, ಮುಸ್ಲಿಮ್)

3. ಸಫಿಯ್ಯ ಬಿನ್ತಿ ಶೀಬ ಹೇಳುತ್ತಾರೆ-

ಪ್ರವಾದಿ(ಸ) ಅವರು ತಮ್ಮ ಓರ್ವ ಪತ್ನಿಯ ವಿವಾಹದ ಬಳಿಕ ಅರ್ಧ ಸೇರು ಜೋಳದ ವಲೀಮ ಮಾಡಿದರು. (ಮಿಶ್ಕಾತ್- ಬುಖಾರಿಯಿಂದ)

## ವಲೀಮ ಮಾಡಲು ಇತರರ ನೆರವು

ಪ್ರವಾದಿ(ಸ) ಯಾವ ಸಮಾಜವನ್ನು ಕಟ್ಟಿ ಬೆಳೆಸಿದರೋ ಅದರಲ್ಲಿ ಮುಸ್ಲಿಮರು ಪರಸ್ಪರ ನೆರವಾಗುವವರಾಗಿದ್ದರು. ಒಬ್ಬನು ಇನ್ನೊಬ್ಬನಿಂದ ನೆರವು ಪಡೆಯುವುದನ್ನು ಅವಮಾನವೆಂದು ಬಗೆಯುತ್ತಿರಲಿಲ್ಲ. ಅದರ ಪುರಾವೆಗಳು ಮೇಲೆ ಪ್ರಸ್ತಾಪಿಸಲ್ಪಟ್ಟಿವೆ.

ಹ. ಸಫಿಯ್ಯಾರ ವಿವಾಹದ ನಂತರ ಪ್ರವಾದಿ(ಸ) ನೀಡಿದ ವಲೀಮ ಸತ್ಕಾರವು ಸಹಾಬಿಗಳ ನೆರವಿನಿಂದಾಗಿತ್ತು.

ಅದೇ ರೀತಿ ಹ. ಅಲೀಯವರು ಫಾತಿಮಾರನ್ನು ವಿವಾಹವಾದ ನಂತರ, ಮಾಡಿದ ವಲೀಮವು ಅನ್ಸಾರ್ ಗೋತ್ರದ ಒಂದು ತಂಡದ ನೆರವಿನಿಂದಾಗಿತ್ತು. ಇದರಿಂದ ನಮಗೆ ಸಿಗುವ ಪಾಠವೇನೆಂದರೆ ಯಾರಿಗಾದರೂ ಮದುವೆಯ ಬಳಿಕ ವಲೀಮ ಮಾಡಲು ಸಾಧ್ಯವಾಗದಿದ್ದರೆ ಇತರ ಸ್ಥಿತಿವಂತ ಮುಸ್ಲಿಮರು ಪ್ರಾಮಾಣಿಕವಾಗಿ ಅವನಿಗೆ ಸಹಾಯ ಮಾಡಬೇಕು. ಈ ಸಹಾಯವು ಪ್ರಾಮಾಣಿಕವಾದುದೆಂದು ಆ ಬಡ ಮದುಮಗನೂ ಮನಗಂಡರೆ, ಅದನ್ನು ಸ್ವೀಕರಿಸಿ ವಲೀಮ ಮಾಡಬೇಕು. ತಿನ್ನುವ, ಕುಡಿಯುವಂತಹ ವಸ್ತುಗಳನ್ನೇ ಸಹಾಯ ಮಾಡಬೇಕೆಂದಿಲ್ಲ. ಅದಕ್ಕೆ ಹಣವನ್ನೂ ನೀಡಬಹುದು.

## ವಲೀಮ ಸಿರಿವಂತರಿಗೆ ಮಾತ್ರ ಸಲ್ಲದು

ವಲೀಮದ ಸತ್ಕಾರ ಕೂಟಕ್ಕೆ ಕೇವಲ ಸಿರಿವಂತರನ್ನು ಕರೆಯುವುದು, ಬಡವರನ್ನು ಕಡೆಗಣಿಸುವುದು ಧರ್ಮಸಮ್ಮತವಲ್ಲ.

ಹ. ಅಬೂ ಹುರೈರಾ(ರ) ಅವರು ವರದಿ ಮಾಡಿರುವ ಪ್ರಕಾರ, ಪ್ರವಾದಿ(ಸ) ಹೀಗೆ ಹೇಳಿದ್ದಾರೆ- ಬಡವರನ್ನು ಕಡೆಗಣಿಸಿ ಕೇವಲ ಸಿರಿವಂತರನ್ನು ಆಮಂತ್ರಿಸಿ ನೀಡುವ ವಲೀಮದ ಭೋಜನ ಅತ್ಯಂತ ಕೆಟ್ಟ ಭೋಜನವಾಗಿದೆ.

**(ಮಿಷ್ಕಾತ್- ಬುಖಾರಿ, ಮುಸ್ಲಿಮ್)**

## ವಲೀಮದ ಆಹ್ವಾನ ನಿರಾಕರಿಸಬಾರದು

ಒಬ್ಬ ಮುಸ್ಲಿಮನು ಇನ್ನೊಬ್ಬ ಮುಸ್ಲಿಮನನ್ನು ಕುಟುಂಬ ಸಂಬಂಧ ಅಥವಾ ಇಸ್ಲಾಮೀ ಸಹೋದರ ಸಂಬಂಧದ ಆಧಾರದಲ್ಲಿ ಊಟಕ್ಕೆ ಕರೆದರೆ- ಅದು ವಲೀಮದ್ದಾಗಲಿ, ಇನ್ನಿತರ ಸತ್ಕಾರದ್ದಾಗಲಿ- ಅದನ್ನು ಸ್ವೀಕರಿಸಬೇಕಾದುದು ಕಡ್ಡಾಯ. ಈ ಕುರಿತು ಅನೇಕ ಹದೀಸ್‌ಗಳಿವೆ.

1. ಸೆರೆಯಾಳುಗಳಿಗೆ ಸಹಾಯ ಮಾಡಿ ಅವರನ್ನು ಬಿಡುಗಡೆ ಮಾಡಿಸಿರಿ, ಊಟದ ಆಮಂತ್ರಣವನ್ನು ಸ್ವೀಕರಿಸಿರಿ ಮತ್ತು ರೋಗಿಯನ್ನು ಸಂದರ್ಶಿಸಿರಿ.

**(ಬುಖಾರಿ, ಮುಸ್ಲಿಮ್)**

2. ನಿಮ್ಮನ್ನು ಯಾರಾದರೂ ವಲೀಮಕ್ಕೆ ಕರೆದರೆ ಅದಕ್ಕೆ ಹೋಗಬೇಕು.
(ಬುಖಾರಿ, ಮುಸ್ಲಿಮ್)

3. ಆಮಂತ್ರಣ ಸ್ವೀಕರಿಸದವನು ಅಲ್ಲಾಹ್ ಮತ್ತು ಆತನ ಪ್ರವಾದಿಯ ಆಜ್ಞೋಲ್ಲಂಘನೆ ಮಾಡಿದನು. (ಬುಖಾರಿ, ಮುಸ್ಲಿಮ್)

ಉಪವಾಸದ ಸ್ಥಿತಿಯಲ್ಲಿರುವಾಗಲೂ ಆಮಂತ್ರಣವನ್ನು ತಿರಸ್ಕರಿಸಬಾರದು. ಪ್ರವಾದಿ(ಸ) ಹೀಗೆಂದಿದ್ದಾರೆ-

ನಿಮ್ಮ ಪೈಕಿ ಯಾರನ್ನಾದರೂ ಊಟಕ್ಕೆ ಆಮಂತ್ರಿಸಲಾದರೆ ಅದನ್ನು ಸ್ವೀಕರಿಸ ಬೇಕು. ಅವನು ಉಪವಾಸದಲ್ಲಿಲ್ಲದಿದ್ದರೆ ಊಟದ ಆಹ್ವಾನವನ್ನು ಸ್ವೀಕರಿಸಬೇಕು. ಉಪವಾಸವಿದ್ದರೆ ಆಮಂತ್ರಿಸುವವನಿಗಾಗಿ ಪ್ರಾರ್ಥಿಸಬೇಕು.
(ಮುಸ್ಲಿಮ್, ನಸಾಈ, ಬೈಹಕಿ)

## ಆಮಂತ್ರಿಸುವವನಿಗಾಗಿ ಉಪವಾಸ ಬಿಡುವುದು

ಕೆಲವು ಹದೀಸ್‌ಗಳಿಂದ ತಿಳಿದು ಬರುವಂತೆ, ಐಚ್ಛಿಕ ಉಪವಾಸ ಮಾಡಿರುವಾತನಿಗೆ ಯಾರಾದರೂ ಊಟದ ಆಮಂತ್ರಣ ನೀಡಿದರೆ ಅವನು ಉಪವಾಸ ತೊರೆಯಬಹುದು.

ಒಂದು ಹದೀಸ್ ಹೀಗಿದೆ-

ನಿಮ್ಮ ಪೈಕಿ ಯಾರನ್ನಾದರೂ ಊಟಕ್ಕೆ ಆಮಂತ್ರಿಸಲಾದರೆ ಅದನ್ನು ಸ್ವೀಕರಿಸಿ ಅಲ್ಲಿಗೆ ಹೋಗಬೇಕು. ಅಲ್ಲಿ ಬೇಕಾದರೆ ಊಟ ಮಾಡಬಹುದು. ಇಲ್ಲವಾದರೆ ಸುಮ್ಮನಿರಲೂ ಬಹುದು. (ಮುಸ್ಲಿಮ್, ಅಹ್ಮದ್)

ಒಬ್ಬನು ಐಚ್ಛಿಕ ಉಪವಾಸ ಮಾಡಿದ್ದು ಅವನನ್ನು ಊಟಕ್ಕೆ ಕರೆದವನು ಊಟ ಮಾಡಲು ಒತ್ತಾಯಿಸಿದಾಗ ನಿರಾಕರಿಸಲು ಸಂಕೋಚವಾದರೆ ಅವನು ಉಪವಾಸ ತೊರೆಯುವುದು ಶ್ರೇಷ್ಠವೆಂದು ಶೇಖ್ ಅಲ್ಬಾನಿಯವರು ಇಲ್ಲಿ ಟಿಪ್ಪಣಿ ಬರೆದಿದ್ದಾರೆ. ಇಬ್ನು ತೀಮಿಯ್ಯಾರ ಫತ್ವಾಗಳಲ್ಲೂ, ಐಚ್ಛಿಕ ಉಪವಾಸ ತೊರೆಯುವ ಅನುಮತಿ ಹದೀಸ್‌ನಲ್ಲಿದೆಯೆಂದು ಹೇಳಲಾಗಿದೆ.

ಪ್ರವಾದಿ(ಸ) ಹೇಳಿದರು- ಐಚ್ಛಿಕ ಉಪವಾಸವಿರುವವನು ತನ್ನ ಮೇಲೆ ತಾನೇ ಅಧಿಕಾರ ಉಳ್ಳವನಾಗಿದ್ದಾನೆ. ಅವನು ಉಪವಾಸ ಪೂರ್ಣಗೊಳಿಸಲೂಬಹುದು. ಮಧ್ಯದಲ್ಲಿ ತೊರೆಯಲೂ ಬಹುದು. (ನಸಾಈ, ಹಾಕಿಮ್, ಬೈಹಕೀ)

ಐಚ್ಛಿಕ ಉಪವಾಸವನ್ನು ಮಧ್ಯದಲ್ಲಿ ತೊರೆದರೆ ಅದಕ್ಕೆ ಕಝಾ ಆಚರಿಸುವುದು ಕಡ್ಡಾಯವೇ ಎಂಬ ವಿಷಯದಲ್ಲಿ ಕರ್ಮಶಾಸ್ತ್ರದಲ್ಲಿ ವಿಭಿನ್ನ ಅಭಿಪ್ರಾಯಗಳಿವೆ. ಕಾರಣವೇನೆಂದರೆ ಕೆಲವು ಹದೀಸ್‌ಗಳಲ್ಲಿ ಉಪವಾಸ ತೊರೆಯುವವನು ಬೇಕಾದರೆ ಕಝಾ

ಮಾಡಬಹುದು ಎಂದಿದೆ. ಇನ್ನು ಕೆಲವು ಹದೀಸ್‌ಗಳ ಪ್ರಕಾರ ಪ್ರವಾದಿ(ಸ) ಅವರು ಕಝಾ ಆಚರಿಸಬೇಕೆಂದು ಅಪ್ಪಣೆ ಕೊಟ್ಟಿದ್ದಾರೆ. ಶೇಖ್ ಅಲ್ಬಾನಿಯವರು ಕಝಾ ಆಚರಿಸ ಬೇಕೆಂದಿಲ್ಲವೆಂಬ ಅಭಿಪ್ರಾಯವನ್ನು ಅಂಗೀಕರಿಸಿದ್ದಾರೆ. ಹನಫೀ ಕರ್ಮಶಾಸ್ತ್ರ ಪ್ರಕಾರ ಐಚ್ಛಿಕ ಉಪವಾಸ ತೊರೆದರೆ ಅದರ ಕಝಾ ಕಡ್ಡಾಯವಾಗಿ ಆಚರಿಸಬೇಕು.

## ಧರ್ಮಬಾಹಿರ ಔತಣಕೂಟಕ್ಕೆ ಹೋಗಬಾರದು

ವಲೀಮದ ಔತಣಕೂಟವಾಗಲೀ ಇನ್ನಿತರ ಸತ್ಕಾರ ಕೂಟಗಳಾಗಿರಲಿ ಅದರಲ್ಲಿ ಧರ್ಮಬಾಹಿರ ಕಾರ್ಯವೇನಾದರೂ ನಡೆಯುತ್ತಿದ್ದರೆ ಅಂತಹ ಸಭೆಗಳಿಗೆ ಹೋಗುವುದು ಧರ್ಮ ಸಮ್ಮತವಲ್ಲ. ಆದರೆ ಪಾಪ ಕಾರ್ಯವನ್ನು ತಡೆಯಬಲ್ಲೆನೆಂಬ ಉದ್ದೇಶದಿಂದ ಯಾರಾದರೂ ಅಂತಹ ಕೂಟಕ್ಕೆ ಹೋದರೆ ಅದು ಆಕ್ಷೇಪಾರ್ಹವಲ್ಲ. ಅಲ್ಲಿ ತನ್ನ ಉದ್ದೇಶ ಸಫಲವಾಗದಿದ್ದರೆ ಅವನು ಮರಳಬೇಕು. ಸತ್ಕಾರ ಕೂಟದಲ್ಲಿ ಭಾಗವಹಿಸಬಾರದು.

ಅಲ್ಲಾಹ್ ಮತ್ತು ಪರಲೋಕದ ಮೇಲೆ ವಿಶ್ವಾಸವಿರುವ ವ್ಯಕ್ತಿ ಮದ್ಯಪಾನದ ವ್ಯವಸ್ಥೆಯಿರುವಂತಹ ಸತ್ಕಾರಕೂಟದಲ್ಲಿ ಭಾಗವಹಿಸಲೇಬಾರದೆಂದು ಪ್ರವಾದಿ(ಸ) ಹೇಳಿರುವುದಾಗಿ ಹ. ಉಮರ್(ರ) ಉಲ್ಲೇಖಿಸಿದ್ದಾರೆ.

(ಅಹ್ಮದ್, ತಿರ್ಮಿದಿ)

ಪಾಪಕಾರ್ಯಗಳು ನಡೆಯುವಂತಹ ಸತ್ಕಾರಕೂಟದ ಆಮಂತ್ರಣವನ್ನು ನಮ್ಮ ಪೂರ್ವಜರು ಸ್ವೀಕರಿಸುತ್ತಿರಲಿಲ್ಲ.

ಹ. ಉಮರ್(ರ) ಸಿರಿಯಕ್ಕೆ ಹೋದಾಗ ಕ್ರೈಸ್ತರ ಆಢ್ಯ ವ್ಯಕ್ತಿಯೊಬ್ಬರು ಅವರಿಗಾಗಿ ಇಗರ್ಜಿಯಲ್ಲಿ ಔತಣಕೂಟವೊಂದರ ವ್ಯವಸ್ಥೆ ಮಾಡಿ ಅವರನ್ನೂ ಅವರ ಸಂಗಾತಿಗಳನ್ನೂ ಊಟಕ್ಕೆ ಸತ್ಕರಿಸಿದರು. ಅದಕ್ಕೆ ಹ. ಉಮರ್ ಹೀಗೆ ಉತ್ತರಿಸಿದರು- ನಿಮ್ಮ ಇಗರ್ಜಿಗಳಲ್ಲಿ ಭಿತ್ತಿಚಿತ್ರಗಳಿರುವುದರಿಂದ ನಾವು ಅಲ್ಲಿಗೆ ಬರುವಂತಿಲ್ಲ. (ಬೈಹಕಿ)

ಅಬೂ ಮಸ್‌ಊದ್ ಉಕ್ಬಾ ಬಿನ್ ಆಯಿರ್‌ರಿಗೆ ಒಬ್ಬ ವ್ಯಕ್ತಿ ಊಟ ತಯಾರಿಸಿ ಅವರನ್ನು ಊಟಕ್ಕೆ ಕರೆದನು. ನಿಮ್ಮ ಮನೆಯಲ್ಲಿ ಭಿತ್ತಿಚಿತ್ರಗಳಿವೆಯೇ ಎಂದು ಕೇಳಿದಾಗ ಆ ವ್ಯಕ್ತಿ ಹೌದೆಂದನು. ಅವರು ಮನೆಯೊಳಗೆ ಪ್ರವೇಶಿಸಲು ನಿರಾಕರಿಸಿದರು. ತರುವಾಯ ಆ ಚಿತ್ರಗಳನ್ನು ಅಳಿಸಿ ಹಾಕಿದಾಗ ಅವರು ಮನೆಯೊಳಗೆ ಪ್ರವೇಶಿಸಿದರು. (ಬೈಹಕೀ)

ಇಮಾಮ್ ಔಝಾಈ ಹೇಳುತ್ತಾರೆ- ನಗಾರಿ, ವಾದ್ಯಗಳಿರುವಂತಹ ವಲೀಮದ ಸತ್ಕಾರ ಕೂಟಗಳಿಗೆ ನಾವು ಹೋಗುವುದಿಲ್ಲ.

(ಅಬುಲ್ ಹಸನ್ ಅರಬಿ- ಅಲ್‌ಫವಾಇದುಲ್ ಮುಂತಕಾತ್)

## ಆಮಂತ್ರಿಸಿದವನಿಗಾಗಿ ಪ್ರಾರ್ಥಿಸುವುದು

ಔತಣ ಕೂಟದಲ್ಲಿ ಭಾಗವಹಿಸಿ ಊಟ ಮಾಡಿಯಾದ ಬಳಿಕ ಆಮಂತ್ರಿಸಿದವನಿಗಾಗಿ ಪ್ರಾರ್ಥಿಸುವುದು ಪುಣ್ಯ ಕಾರ್ಯವಾಗಿದೆ. ಹದೀಸ್‌ಗಳಲ್ಲಿ ಈ ಕುರಿತು ವಿವಿಧ ಪ್ರಾರ್ಥನೆಗಳು ಉಲ್ಲೇಖಿಗೊಂಡಿವೆ. ಬಹಳ ಪರಿಣಾಮಕಾರಿಯಾದ ಕೆಲವು ಹದೀಸ್‌ಗಳನ್ನು ಇಲ್ಲಿ ಕೊಡಲಾಗಿದೆ.

1. ಅಬ್ದುಲ್ಲಾ ಬಿನ್ ಬಸರ್ ಉಲ್ಲೇಖಿಸುತ್ತಾರೆ- ನನ್ನ ತಂದೆ ಪ್ರವಾದಿ(ಸ) ಅವರಿಗಾಗಿ ಊಟ ತಯಾರಿಸಿ ಅವರನ್ನು ಆಹ್ವಾನಿಸಿದರು. ಪ್ರವಾದಿ(ಸ) ಆಮಂತ್ರಣವನ್ನು ಸ್ವೀಕರಿಸಿದರು. ಊಟವಾದ ನಂತರ ಈ ರೀತಿ ಪ್ರಾರ್ಥಿಸಿದರು.

اَللّٰهُمَّ اغْفِرْ لَهُمْ وَارْحَمْهُمْ وَبَارِكْ لَهُمْ فِيمَا رَزَقْتَهُمْ

**"ಅಲ್ಲಾಹುಮ್ಮಗ್‌ಫಿರ್‌ಲಹುಮ್, ವರ್‌ಹಮ್‌ಹುಮ್ ವಬಾರಿಕ್‌ಲಹುಮ್ ಫೀಮಾ ರಝುಕ್ತಹುಮ್."**

(ಓ ಅಲ್ಲಾಹ್! ಇವರೆಲ್ಲರಿಗೂ ಕ್ಷಮೆ ನೀಡು. ಇವರ ಮೇಲೆ ಕರುಣೆ ತೋರು. ನೀನು ಇವರಿಗೆ ಇವರಿಗೆ ನೀಡಿರುವ ಆಹಾರದಲ್ಲಿ ಸಮೃದ್ಧಿಯುಂಟುಮಾಡು.)

**(ಮುಸ್ಲಿಮ್, ಅಬೂದಾವೂದ್, ತಿರ್ಮಿದಿ, ನಸಾಈ)**

2. ಮಿಕ್ದಾದ್ ಬಿನ್ ಅಸ್ವದ್ ಹೀಗೆ ಉಲ್ಲೇಖಿಸುತ್ತಾರೆ-

ನಾನು ಮತ್ತು ನನ್ನ ಇಬ್ಬರು ಸಂಗಾತಿಗಳು ಪ್ರವಾದಿ(ಸ) ಅವರ ಬಳಿಗೆ ಹೋದೆವು. ನಮಗೆ ಬಹಳ ಹಸಿವಾಯಿತು. ನಾವು ಜನರ ಮುಂದೆ ನಮ್ಮ ಬೇಡಿಕೆಯನ್ನಿಟ್ಟೆವು. ಆದರೆ ಯಾರೂ ನಮಗೆ ಊಟ ಕೊಡಲಿಲ್ಲ. ತರುವಾಯ ಪ್ರವಾದಿವರ್ಯರು ನಮ್ಮನ್ನು ಅವರ ಮನೆಗೆ ಕರೆದುಕೊಂಡು ಹೋದರು. ಆಗ ಅವರ ಬಳಿ ಹಾಲು ಕೊಡುವ ನಾಲ್ಕು ಆಡುಗಳಿದ್ದುವು. ಪ್ರವಾದಿವರ್ಯರು ನನ್ನೊಂದಿಗೆ ಆ ನಾಲ್ಕು ಆಡುಗಳ ಹಾಲನ್ನು ನಾಲ್ಕು ಪಾಲು ಮಾಡಬೇಕೆಂದು ಆಜ್ಞಾಪಿಸಿದರು. ನಾನು ಹಾಗೇ ಮಾಡುತ್ತಿದ್ದೆ. ನಾವು ಮೂವರು ನಮ್ಮ ಪಾಲನ್ನು ಕುಡಿಯುತ್ತಿದ್ದೆವು. ಪ್ರವಾದಿವರ್ಯರ ಪಾಲನ್ನು ತೆಗೆದಿಡುತ್ತಿದ್ದೆವು. ಒಂದು ದಿನ ಪ್ರವಾದಿ(ಸ) ಬರುವಾಗ ರಾತ್ರಿ ತುಂಬಾ ತಡವಾಯಿತು. ಅವರು ಯಾವನೋ ಅನ್ಸಾರಿಯವರ ಮನೆಗೆ ಹೋಗಿ ಚೆನ್ನಾಗಿ ತಿಂದುಂಡು ಬರಬಹುದೆಂದು ಭಾವಿಸಿ ನಾನು ಎದ್ದು ಅವರ ಪಾಲಿನ ಹಾಲನ್ನೂ ಕುಡಿದು ಬಿಟ್ಟೆ ಮತ್ತು ಪಾತ್ರೆಯನ್ನು ಮುಚ್ಚಿಟ್ಟೆ. ಹಾಲು ಕುಡಿದ ನಂತರ ನನಗೆ ಚಿಂತೆ ಹತ್ತಿತು. ಒಂದು ವೇಳೆ ಪ್ರವಾದಿ(ಸ) ಏನೂ ತಿನ್ನದೆ ಬರಿ ಹೊಟ್ಟೆಯಲ್ಲೇ ಬಂದರೆ ನಾನೇನು ಮಾಡಲಿ?

ಕೊನೆಗೆ ನಾನು ಒಂದು ಚದ್ದರವನ್ನು ಹೊದ್ದು ಮಲಗಿದೆ. ಅದು ತುಂಬಾ ಸಣ್ಣದಾಗಿತ್ತು. ತಲೆ ಮುಚ್ಚಿದರೆ ಕಾಲು ಹೊರಗೆ ಕಾಣುತ್ತಿತ್ತು. ಕಾಲಿಗೆ ಹಾಕಿದರೆ ತಲೆ ತೆರೆಯುತ್ತಿತ್ತು. ನನಗೆ ನಿದ್ರೆಯೇ ಹತ್ತುತ್ತಿರಲಿಲ್ಲ. ಪ್ರವಾದಿವರ್ಯರು ಬರಿ ಹೊಟ್ಟೆಯಲ್ಲಿ ಬಂದರೆ ಏನು ಮಾಡುವುದೆಂಬ ಚಿಂತೆಯಲ್ಲೇ ಇದ್ದೆ. ಅಷ್ಟರಲ್ಲಿ ಪ್ರವಾದಿ(ಸ) ಬಂದರು ಮತ್ತು ಮಧ್ಯಮ ಸ್ವರದಲ್ಲಿ ಸಲಾಮ್ ಹೇಳಿದರು. ಅದನ್ನು ಎಚ್ಚರವಿರುವವನು ಕೇಳಬಹುದಿತ್ತು. ನಿದ್ರಿಸುವವನ ನಿದ್ರೆ ಭಂಗವಾಗುತ್ತಿರಲಿಲ್ಲ. ಅವರು ಮಸೀದಿಗೆ ಹೋಗಿ ನಮಾಝ್ ನಿರ್ವಹಿಸಿ ಒಂದು ಹಾಲಿನ ಪಾತ್ರೆಯನ್ನು ತೆರೆದರು. ಅದರಲ್ಲೇನೂ ಇರಲಿಲ್ಲ. ಪ್ರವಾದಿ(ಸ) ಆಗ ಹೀಗೆ ಪ್ರಾರ್ಥಿಸಿದರು:

اَللّٰهُمَّ اَطْعِمْ مَنْ اَطْعَمَنِي وَاسْقِ مَنْ سَقَانِي

"ಅಲ್ಲಾಹುಮ್ಮ ಅತ್‌ಇಮ್ ಮನ್ ಅತ್‌ಅಮನೀ ವಸ್‌ಕಿ ಮನ್ ಸಕಾನೀ."

(ಅಲ್ಲಾಹನೇ! ಯಾರು ನನಗೆ ಉಣಿಸುತ್ತಾನೋ ಅವನಿಗೆ ನೀನು ಉಣಿಸು. ಯಾರು ನನಗೆ ಕುಡಿಸುತ್ತಾನೋ ಅವನಿಗೆ ನೀನು ಕುಡಿಸು.)

ನಾನು ಆ ಪ್ರಾರ್ಥನೆಯನ್ನು ನನ್ನ ಪಾಲಿಗೆ ವರವೆಂದು ಭಾವಿಸಿದೆ. ನಾನು ಎದ್ದು ಚದ್ದರವನ್ನು ಸೊಂಟಕ್ಕೆ ಬಿಗಿದೆ. ಛಡಿ ಹಿಡಿದು ಆಡುಗಳ ಬಳಿಗೆ ಹೋದೆ. ಪ್ರವಾದಿವರ್ಯರಿಗಾಗಿ ಅದನ್ನು ದಿಬಹ್ ಮಾಡಲು ಹೆಚ್ಚು ಕೊಬ್ಬಿದ ಆಡು ಯಾವುದೆಂದು ಪರೀಕ್ಷಿಸಿದೆ. ಆದರೆ ನನ್ನ ಕೈ ಯಾವ ಆಡಿನ ಕೆಚ್ಚಲಿಗೆ ತಾಗುತ್ತಿತ್ತೋ ಅದು ಹಾಲಿನಿಂದ ತುಂಬಿರುತ್ತಿತ್ತು. ನಾನು ಹಾಲಿನ ಪಾತ್ರೆಯನ್ನು ಹಿಡಿದು ಹಾಲು ಕರೆದೆ. ಪಾತ್ರೆ ತುಂಬಿದಾಗ ಅದನ್ನೆತ್ತಿ ಪ್ರವಾದಿವರ್ಯರ ಬಳಿಗೆ ಹೋದೆ.

ಪ್ರವಾದಿ(ಸ) ಕೇಳಿದರು- ಓ ಮಿಕ್ದಾದ್! ಇಂದು ರಾತ್ರಿ ನೀವಾರೂ ಹಾಲು ಕುಡಿಯಲಿಲ್ಲವೇ?

ನಾನು ಹೇಳಿದೆ - ಪ್ರವಾದಿವರ್ಯರೇ! ತಾವು ಹಾಲು ಕುಡಿಯಿರಿ. ಆಗ ಪ್ರವಾದಿವರ್ಯರು ತಲೆಯೆತ್ತಿ, ಮಿಕ್ದಾದ್! ಏನು ವಿಷಯ ನಿಮ್ಮಿಂದೇನಾದರೂ ತಪ್ಪು ಸಂಭವಿಸಿದೆಯೇ ಎಂದು ಕೇಳಿದರು.

ನಾನು ಹೇಳಿದೆ 'ತಾವು ಕುಡಿಯಿರಿ, ಅನಂತರ ನಾನು ನಿಜ ಸಂಗತಿಯನ್ನು ಹೇಳುತ್ತೇನೆ.'

ಪ್ರವಾದಿವರ್ಯರು ಹಾಲು ಕುಡಿದರು, ಉಳಿದುದನ್ನು ನನಗೆ ನೀಡಿದರು ನಾನು ಕುಡಿದೆ. ಪ್ರವಾದಿವರ್ಯರ ಹೊಟ್ಟೆ ತುಂಬಿತೆಂದು ನನಗೆ ಖಾತ್ರಿಯಾದಾಗ ಬಿದ್ದು ಬಿದ್ದು ನಕ್ಕೆ. ತರುವಾಯ ಸಂಪೂರ್ಣ ವೃತ್ತಾಂತವನ್ನು ಅವರಿಗೆ ತಿಳಿಸಿದೆ.

ಪ್ರವಾದಿ(ಸ) ಹೇಳಿದರು- ಇದು ಆಕಾಶದಿಂದ ಅವತರಿಸಿದ ಒಂದು ಬರ್ಕತ್ (ಅನುಗ್ರಹ) ಆಗಿದೆ. ನೀವು ಮೊದಲೇ ಏಕೆ ಹೇಳಲಿಲ್ಲ. ನಾನು ಆ ಇಬ್ಬರು ಸಂಗಾತಿಗಳನ್ನೂ ಎಬ್ಬಿಸುತ್ತಿರಲಿಲ್ಲವೇ? ಆಗ ನಾನು ಹೇಳಿದೆ, 'ಸತ್ಯ ಸಂದೇಶದೊಂದಿಗೆ ತಮ್ಮನ್ನು ಕಳಿಸಿರುವ ಆ ದೇವನಾಣೆ! ನನಗೂ ತಮಗೂ ಅನುಗ್ರಹ ಲಭಿಸಿರುವಾಗ ನಾನೇನು ತಪ್ಪು ಮಾಡಿದೆ ಎಂಬ ಬಗ್ಗೆ ನನಗೆ ಚಿಂತೆಯೇ ಇಲ್ಲ.'

**(ಮುಸ್ಲಿಮ್, ಅಹ್ಮದ್, ತಿರ್ಮಿದಿ, ಇಬ್ನುಸಅದ್)**

ಈ ಪರಿಣಾಮಕಾರಿ ಪಾಠಬೋಧಕ ಹದೀಸ್‌ನಲ್ಲಿ ಪ್ರವಾದಿ(ಸ) ಮಾಡಿದ ಪ್ರಾರ್ಥನೆಯನ್ನು ನಿಮ್ಮನ್ನು ಆಮಂತ್ರಿಸಿದ ಯಾವ ವ್ಯಕ್ತಿಗಾಗಿಯೂ ಮಾಡಬಹುದು.

3. ಹ. ಅನಸ್(ರ) ಉಲ್ಲೇಖಿಸುತ್ತಾರೆ-

ಪ್ರವಾದಿ(ಸ) ಅವರು ಮದೀನದವರನ್ನು (ಅನ್ಸಾರ್) ಭೇಟಿಯಾಗಲು ಹೋಗುತ್ತಿದ್ದರು. ಅವರ ಕೇರಿಗೆ ತಲಪಿದಾಗ ಅನ್ಸಾರ್‌ರ ಮಕ್ಕಳು ಪ್ರವಾದಿ ವರ್ಯರ(ಸ) ಸುತ್ತ ಸೇರುತ್ತಿದ್ದರು. ಪ್ರವಾದಿ(ಸ) ಮಕ್ಕಳಿಗೆ ಸಲಾಮ್ ಹೇಳುತ್ತಿದ್ದರು. ಅವರ ತಲೆ ನೇವರಿಸುತ್ತಿದ್ದರು. ಅವರಿಗಾಗಿ ಪ್ರಾರ್ಥಿಸುತ್ತಿದ್ದರು. ಒಂದು ದಿನ ಅವರು ಸಅದ್ ಬಿನ್ ಉಬಾದ(ರ) ಅವರ ಮನೆಗೆ ಹೋಗಿ ಒಳಗೆ ಹೋಗಲು ಅನುಮತಿ ಕೇಳಿದರು. ಅವರು "ಅಸ್ಸಲಾಮು ಅಲೈಕುಮ್ ವರಹ್ಮತುಲ್ಲಾಹ್" ಎಂದು ಹೇಳಿದರು. ಸಅದ್‌ರು ಅವರಿಗೆ ಕೇಳಿಸದಂತೆ "ವಅಲೈಕಸ್ಸಲಾಮ್ ವರಹ್ಮತುಲ್ಲಾಹ್" ಎಂದು ಮೆಲ್ಲನೆ ಹೇಳಿದರು. ಪ್ರವಾದಿವರ್ಯರು ಮೂರು ಬಾರಿ ಸಲಾಮ್ ಹೇಳಿದರು. ಅವರು ಪ್ರತಿಯೊಂದು ಬಾರಿಯೂ ಉತ್ತರಿಸಿದರು. ಆದರೆ ಪ್ರವಾದಿವರ್ಯರಿಗೆ ಕೇಳಿಸದಂತೆ ಮೆಲುದನಿಯಲ್ಲಿ ಸಲಾಮ್‌ಗೆ ಉತ್ತರ ನೀಡಿದ್ದರು. ಅನುಮತಿಗಾಗಿ ಮೂರು ಬಾರಿ ಸಲಾಮ್ ಹೇಳುವುದು ಪ್ರವಾದಿವರ್ಯರ(ಸ) ರೂಢಿಯಾಗಿತ್ತು. ಅನುಮತಿ ಸಿಕ್ಕಿದರೆ ಮನೆಯೊಳಗೆ ಪ್ರವೇಶಿಸುತ್ತಿದ್ದರು. ಇಲ್ಲವಾದರೆ ಮರಳುತ್ತಿದ್ದರು. ಹಾಗೆಯೇ ಪ್ರವಾದಿವರ್ಯರು ಮರಳುವಾಗ ಸಅದ್‌ರು ಮನೆಯಿಂದ ಹೊರಬಂದು ಪ್ರವಾದಿವರ್ಯರನ್ನು ಹಿಂಬಾಲಿಸುತ್ತಾ, ಪ್ರವಾದಿವಯರೇ! ನನ್ನ ತಂದೆ-ತಾಯಿಗಳು ತಮಗೆ ಅರ್ಪಿತ. ತಮ್ಮ ಪ್ರತಿಯೊಂದು ಸಲಾಮ್‌ಗೂ ನಾನು ಕೂಡಲೇ ಉತ್ತರಿಸಿದ್ದೇನೆ. ಆದರೆ ಬೇಕೆಂತಲೇ ದನಿ ತಗ್ಗಿಸಿದ್ದೆ. ನಾನು ತಮ್ಮ ಸಲಾಮ್‌ನ ಅನುಗ್ರಹ ಪಡೆಯಲಿಕ್ಕಾಗಿ ಹಾಗೆ ಮಾಡಿದ್ದೆ. ತಾವು ಮನೆಗೆ ಬನ್ನಿ ಎಂದು ಹೇಳಿದರು. ಪ್ರವಾದಿ(ಸ) ಸಅದ್‌ರ ಮನೆಗೆ ಹೋದರು. ಅವರು ಒಣ ದ್ರಾಕ್ಷೆಯನ್ನು ಮುಂದಿಟ್ಟರು. ಪ್ರವಾದಿ(ಸ) ಅದನ್ನು ತಿಂದ ಬಳಿಕ ಈ ರೀತಿ ಪ್ರಾರ್ಥಿಸಿದರು-

أَكَلَ طَعَامَكُمُ الْأَبْرَارُ وَ صَلَّتْ عَلَيْكُمُ الْمَلَائِكَةُ وَأَفْطَرَ عِنْدَكُمُ الصَّائِمُونَ

"ಅಕಲ ತಆಮಕುಮುಲ್ ಅಬ್ರಾರು ವ ಸಲ್ಲತು ಅಲೈಕುಮುಲ್ ಮಲಾಇಕತು ವ ಅಫ್ತರ ಇಂದಕುಮುಸ್ಸಾಇಮೂನ."

(ನಿಮ್ಮ ಆಹಾರವನ್ನು ಸಜ್ಜನರು ತಿನ್ನಲಿ. ದೇವಚರರು ನಿಮಗಾಗಿ ಪ್ರಾರ್ಥಿಸಲಿ ಮತ್ತು ಉಪವಾಸಿಗರು ನಿಮ್ಮಲ್ಲಿ ಪಾರಣೆ ಮಾಡಲಿ.)

**(ಅಹ್ಮದ್, ತಹಾವೀ, ಇಬ್ನುಮಾಜಃ, ಬೈಹಕಿ, ತಬ್ರಾನಿ)**

ಈ ವಾಕ್ಯದಲ್ಲಿ "ಉಪವಾಸಿಗರು ನಿಮ್ಮಲ್ಲಿ ಪಾರಣೆ ಮಾಡಲಿ" ಎಂಬುದು ಪ್ರಾರ್ಥನೆಯಾಗಿದೆ. ಅದರ ಅರ್ಥ, ಅಲ್ಲಾಹನು ನಿಮಗೆ ಇಂತಹ ಅವಕಾಶ ನೀಡಲಿ, ಉಪವಾಸಿಗರು ನಿಮ್ಮಲ್ಲಿ ಪಾರಣೆ ಮಾಡುವ ಮೂಲಕ ನಿಮಗೂ ಅವರ ಉಪವಾಸದ ಪ್ರತಿಫಲ ಸಿಗುವಂತಾಗಲಿ ಎಂದಾಗಿದೆ.

## ಪ್ರವಾದಿಚರ್ಯೆ ಮತ್ತು ಶರೀಅತ್‌ಗೆ ವಿರುದ್ಧ ನಡೆಯಬಾರದು

ವಿವಾಹ ಸಮಾರಂಭಗಳ ವೇಳೆ ತರತರದ ಕೆಟ್ಟ ಸಂಪ್ರದಾಯಗಳು ಮುಸ್ಲಿಮರಲ್ಲಿ ರೂಢಿಯಾಗಿವೆ. ಅದರಿಂದ ಪ್ರವಾದಿಚರ್ಯೆ ಮತ್ತು ಇಸ್ಲಾಮೀ ಶರೀಅತ್‌ನ ಸ್ಪಷ್ಟ ಉಲ್ಲಂಘನೆಯಾಗುತ್ತಿದೆ. ಅದನ್ನು ವರ್ಜಿಸಬೇಕಾದುದು ಅಗತ್ಯ. ನಾಮಮಾತ್ರದ ಮುಸ್ಲಿಮರ ಬಗ್ಗೆ ಇಲ್ಲಿ ಪ್ರಸ್ತಾಪಿಸುವುದಿಲ್ಲ. ಅವರಿಗೆ ಪ್ರವಾದಿಚರ್ಯೆಯೆಂದರೇನು? ಇಸ್ಲಾಮೀ ಶರೀಅತ್ ಎಂದರೇನು ಎಂಬ ತಿಳುವಳಿಕೆಯೂ ಇರುವುದಿಲ್ಲ. ಇಲ್ಲಿ ಪ್ರಸ್ತಾಪಿಸುತ್ತಿರುವುದು ಬೇಕೆಂತಲೇ ಶರೀಅತ್ ವಿರೋಧಿ ಸಂಪ್ರದಾಯಗಳಲ್ಲಿ ಸಿಲುಕಿರುವವರ ಬಗ್ಗೆ. ಈ ಕಿರು ಹೊತ್ತಿಗೆಯಲ್ಲಿ ಎಲ್ಲ ಶರೀಅತ್ ವಿರೋಧಿ ಸಂಪ್ರದಾಯಗಳನ್ನು ಬೆಟ್ಟು ಮಾಡಿ ತೋರಿಸಲು ಸಾಧ್ಯವಿಲ್ಲ. ಕೆಲವು ವಿಷಯಗಳನ್ನು ಮಾತ್ರ ಪ್ರಸ್ತಾಪಿಸಲಾಗುತ್ತಿದೆ.

1. ಸುಶಿಕ್ಷಿತ ಮುಸ್ಲಿಮರಲ್ಲಿ ರೂಢಿಯಲ್ಲಿರುವ ಅತ್ಯಂತ ಕೆಟ್ಟ ಸಂಪ್ರದಾಯ ವರದಕ್ಷಿಣೆಯಾಗಿವೆ. ಈ ಕೆಟ್ಟ ಸಂಪ್ರದಾಯದಿಂದಾಗಿ ಸಾವಿರಾರು ಹೆಣ್ಣು ಮಕ್ಕಳು ಮದುವೆಯಾಗದೆ ಕೊಳೆಯುತ್ತಿರುವುದು ಶೋಚನೀಯ. ಇದರಿಂದ ಎಂತಹ ಕೆಡುಕುಗಳು ಸಮಾಜದಲ್ಲಿ ಹರಡುತ್ತಿವೆಯೆಂಬುದನ್ನು ವಿವರಿಸುವ ಅಗತ್ಯವಿಲ್ಲ.

2. ವಾದ್ಯ, ಗಾಯನ ಮತ್ತು ಬೆಂಕಿಯಾಟ ಇತ್ಯಾದಿಗಳು ಕಡಿಮೆಯಾಗಿಲ್ಲ. ಈಗಂತೂ ಅಶ್ಲೀಲ ಗಾನಗಳ ರೆಕಾರ್ಡ್ ಮತ್ತು ಲೌಡ್ ಸ್ಪೀಕರ್‌ಗಳ ಅನಿಯಂತ್ರಿತ ಬಳಕೆಯು ಯಾತನಾಮಯವಾಗಿ ಪರಿಣಮಿಸಿದೆ.

3. ಆಡಂಬರದ ಸತ್ಕಾರಕೂಟ ಮತ್ತು ಭೂರಿ ಭೋಜನಗಳ ವ್ಯವಸ್ಥೆಯೂ ವಿನಾಶಕಾರಿ ಮಟ್ಟಕ್ಕೇರಿದೆ. ಪ್ರವಾದಿ(ಸ) ಅವರಿಗೆ ತಮ್ಮ ಸಂಗಾತಿಗಳು ಮದುವೆ ಮಾಡಿದ ಸುದ್ದಿ ಕೂಡಾ ತಿಳಿದಿರುತ್ತಿರಲಿಲ್ಲ. ಅನಂತರ ಇಂತಹ ಸಹಾಬಿ ಮದುವೆಯಾಗಿದ್ದಾರೆ ಎಂದು ತಿಳಿಯುತ್ತದೆ. ಇದರರ್ಥ ಪ್ರವಾದಿ(ಸ) ಅವರಿಗೂ ಕೂಡಾ ವಿವಾಹದ ಸುದ್ದಿ ಮುಟ್ಟಿಸುವುದಾಗಲಿ ಅವರಿಗೆ ಆಮಂತ್ರಣ ನೀಡುವುದಾಗಲಿ ಅಗತ್ಯವೆಂದು ಅವರು ಭಾವಿಸುತ್ತಿರಲಿಲ್ಲವೆಂದಲ್ಲವೇ? ಆಗ ಮದೀನಾ ಅಷ್ಟೇನೂ ದೊಡ್ಡ ನಗರವಾಗಿರಲಿಲ್ಲ ಎಂಬುದೂ ಗಮನಾರ್ಹ. ಇಂದು ಪರಿಸ್ಥಿತಿ ಎಲ್ಲಿಗೆ ಮುಟ್ಟಿದೆಯೆಂದರೆ ಆಕರ್ಷಕ ಆಮಂತ್ರಣ ಪತ್ರಗಳನ್ನು ಮುದ್ರಿಸಲಿಕ್ಕೂ ದುಬಾರಿ ಖರ್ಚು ಮಾಡಲಾಗುತ್ತದೆ.

4. ಮನೆಗಳನ್ನು ಸಜ್ಜೀಕರಿಸುವಾಗ ಚಿತ್ರಗಳನ್ನೂ ಬೇಕಾಬಿಟ್ಟಿಯಾಗಿ ಬಳಸಲಾಗುತ್ತದೆ. ನಿಕಾಹ್‌ನ ಸಂದರ್ಭದಲ್ಲಿ ಮದುಮಗ ಮತ್ತಿತರರ ಫೋಟೋಗಳನ್ನು ತೆಗೆಯುವುದು ಫ್ಯಾಶನ್ ಆಗಿದೆ. ವಸ್ತುತಃ ಜೀವಂತ ವಸ್ತುಗಳ ಚಿತ್ರ ಬಿಡಿಸುವುದನ್ನು ಹದೀಸ್‌ಗಳಲ್ಲಿ ನಿಷೇಧಿಸಲಾಗಿದೆ. ಕೇವಲ ಪುರುಷರ ಫೋಟೋ ತೆಗೆಯುವುದಲ್ಲ. ಮನೆಯೊಳಗಿನ ಸ್ತ್ರೀಯರ ಫೋಟೋಗಳನ್ನೂ ತೆಗೆಯಲಾಗುತ್ತದೆ.

5. ನಿಕಾಹ್‌ನ ಸಂದರ್ಭದಲ್ಲಿ ಅಥವಾ ಅದಕ್ಕಿಂತ ಮುಂಚೆ ಮದುಮಗನಿಗೆ ಚಿನ್ನದ ಉಂಗುರ ನೀಡುವ ಸಂಪ್ರದಾಯವೂ ಇದೆ. ವಸ್ತುತಃ ಪುರುಷರು ಚಿನ್ನ ಧರಿಸುವುದು ಹರಾಮ್ ಆಗಿದೆ.

## ಪತ್ನಿಯೊಂದಿಗೆ ಸದ್ವರ್ತನೆ

ಒಡನಾಟದಲ್ಲಿ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸಬೇಕಾದುದು ಅವಶ್ಯ. ಅವಳೊಂದಿಗೆ ಕಠೋರವಾಗಿ ವರ್ತಿಸುವುದು ಮತ್ತು ಅವಳ ಮೇಲೆ ಅಕ್ರಮ ವೆಸಗುವುದು ಹರಾಮ್ ಆಗಿದೆ. ಸ್ತ್ರೀಯರು ಪುರುಷರಿಗಿಂತ ದುರ್ಬಲರಾಗಿದ್ದಾರೆ. ಆದುದರಿಂದ ಸಮೀಕ್ಷೆ ನಡೆಸಿದರೆ ಇಂದಿಗೂ 95% ಸ್ತ್ರೀಯರು ಮರ್ದಿತಾವಸ್ಥೆಯಲ್ಲಿರುವರೆಂದು ತಿಳಿದು ಬರುವುದು. ಕೆಲವೊಂದು ಸ್ತ್ರೀಯರು ತಮ್ಮ ಪತಿಯಂದಿರ ಮೇಲೂ ಅತಿಕ್ರಮವೆಸಗುತ್ತಾರೆಂಬುದು ನಿಜ. ಆದರೆ ಅವರ ನಿಷ್ಪತ್ತಿ ಬಹಳ ಕಡಿಮೆ. ತಮ್ಮ ಪತ್ನಿಯರ ಮೇಲೆ ಅಕ್ರಮವೆಸಗುವುದು ಕೇವಲ ಅಶಿಕ್ಷಿತ ಮತ್ತು ಅಜ್ಞಾನಿಗಳು ಮಾತ್ರವಲ್ಲ; ಸಮಾಜದಲ್ಲಿ ಪ್ರತಿಷ್ಠಿತರು ಮತ್ತು ಧಾರ್ಮಿಕ ವ್ಯಕ್ತಿಗಳು ಕೂಡಾ ಅಕ್ರಮವೆಸಗುತ್ತಾರೆ.

ಪತ್ನಿಯೊಂದಿಗೆ ಸದ್ವರ್ತನೆಯು ಎಷ್ಟೊಂದು ಮಹತ್ವದ ವಿಷಯವೆಂದರೆ ಈ ಕುರಿತು ಪ್ರವಾದಿ(ಸ) ಹಜ್ಜತುಲ್ ವಿದಾದ ಪ್ರವಚನದಲ್ಲೂ ತಾಕೀತು ಮಾಡಿದ್ದಾರೆ. ಅದರಲ್ಲಿ ಅವರು ಹೀಗೆಂದಿದ್ದರು,

1. ಜನರೇ! ಕೇಳಿರಿ, ಸ್ತ್ರೀಯರೊಂದಿಗೆ ಉತ್ತಮವಾಗಿ ವರ್ತಿಸಿರಿ. ಯಾಕೆಂದರೆ ಸ್ತ್ರೀಯರು ನಿಮ್ಮ ಬಳಿ 'ಬಂದಿ'ಗಳಾಗಿದ್ದಾರೆ. ಕೇಳಿರಿ, ನಿಮ್ಮ ಪತ್ನಿಯರ ಮೇಲೆ ನಿಮ್ಮ ಹಕ್ಕುಗಳಿವೆ ಮತ್ತು ನಿಮ್ಮ ಮೇಲೆ ನಿಮ್ಮ ಪತ್ನಿಯರ ಹಕ್ಕುಗಳಿವೆ. ನಿಮ್ಮ ಮೇಲೆ ನಿಮ್ಮ ಪತ್ನಿಯರ ಹಕ್ಕುಗಳೇನೆಂದರೆ ನಿಮ್ಮ ಹಾಸಿಗೆಯಲ್ಲಿ ನೀವು ಇಷ್ಟಪಡದಂತಹ ವ್ಯಕ್ತಿಗಳನ್ನು ಕುಳಿತುಕೊಳ್ಳಲು ಬಿಡಬಾರದು. ನೀವು ಇಷ್ಟಪಡ ದಂತಹ ವ್ಯಕ್ತಿಗಳನ್ನು ನಿಮ್ಮ ಮನೆಗೆ ಬರಲು ಬಿಡಬಾರದು. ಕೇಳಿರಿ, ನಿಮ್ಮ ಮೇಲೆ ನಿಮ್ಮ ಪತ್ನಿಯರ ಹಕ್ಕುಗಳೇನೆಂದರೆ ಅವರ ಊಟ ಬಟ್ಟೆಗಳ ವಿಷಯದಲ್ಲಿ ನೀವು ಅವರೊಂದಿಗೆ ಉತ್ತಮವಾಗಿ ವರ್ತಿಸಬೇಕು.
(ತಿರ್ಮಿದಿ, ಇಬ್ನುಮಾಜಃ)

2. ಪ್ರವಾದಿ(ಸ) ಹೇಳಿದರು- ತಮ್ಮ ಮನೆಮಂದಿಯ ಪಾಲಿಗೆ ಉತ್ತಮನಾದವನೇ ನಿಮ್ಮ ಪೈಕಿ ಉತ್ತಮನು ಮತ್ತು ನಾನು ನನ್ನ ಮನೆಯವರ ಪಾಲಿಗೆ ನಿಮ್ಮೆಲ್ಲರಿಗಿಂತ ಉತ್ತಮನಾಗಿರುವೆನು. (ತಹಾವೀ, ತಿರ್ಮಿದಿ, ಅಹ್ಮದ್)

3. ಪ್ರವಾದಿ(ಸ) ಹೇಳಿದರು- ಸತ್ಯವಿಶ್ವಾಸಿಗಳ ಪೈಕಿ ಪರಿಪೂರ್ಣ ವಿಶ್ವಾಸಿಯು ಸಚ್ಚಾರಿತ್ರ್ಯದಲ್ಲಿ ಅತ್ಯುತ್ತಮನಾಗಿರುವವನಾಗಿದ್ದಾನೆ. ಅವರಲ್ಲೂ ಉತ್ತಮರು ತಮ್ಮ ಪತ್ನಿಯರೊಂದಿಗೆ ಉತ್ತಮವಾಗಿರುವವರಾಗಿದ್ದಾರೆ. (ತಿರ್ಮಿದಿ, ಅಹ್ಮದ್)

4. ಪ್ರವಾದಿ(ಸ) ಹೇಳಿದರು- ನ್ಯಾಯ-ನೀತಿಯನ್ನು ಪಾಲಿಸುವವರು ಅಂತ್ಯದಿನದಲ್ಲಿ ಪ್ರಕಾಶದ ಪೀಠಗಳಲ್ಲಿರುವರು. ಅವರು ತಮ್ಮ ಆಡಳಿತದಲ್ಲಿ, ತಮ್ಮ ತೀರ್ಮಾನಗಳಲ್ಲಿ, ತಮ್ಮ ಪತ್ನಿಯರೊಂದಿಗೆ ಹಾಗೂ ತಮ್ಮ ವಶದಲ್ಲಿ ಮತ್ತು ಹೊಣೆಗಾರಿಕೆಯಲ್ಲಿರುವ ಎಲ್ಲ ವಸ್ತುಗಳಲ್ಲೂ ನ್ಯಾಯ-ನೀತಿ ಪಾಲಿಸುವವರಾಗಿದ್ದಾರೆ.

ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸುವ ವಿಷಯದಲ್ಲೂ ನಮಗೆ ಪ್ರವಾದಿ ಮುಹಮ್ಮದ್‌ರೇ(ಸ) ಮಾದರಿ ಆಗಿದ್ದಾರೆ. ಅವರು ತಮ್ಮ ಪತ್ನಿಯರೊಂದಿಗೆ ಯಾವ ರೀತಿ ಜೀವನ ಸಾಗಿಸಿದ್ದರೋ ಅದರ ಪ್ರಸ್ತಾಪವು ಹದೀಸ್ ಮತ್ತು ಸೀರತ್‌ನ ಗ್ರಂಥಗಳಲ್ಲಿ ಧಾರಾಳ ಸಿಗುತ್ತದೆ.. ಹ. ಆಯಿಶಾ(ರ) ಅವರು ಪ್ರವಾದಿ ಪತ್ನಿಯರ ಪೈಕಿ ಅತ್ಯಂತ ಕಿರಿಯ ಪ್ರಾಯದವರಾಗಿದ್ದುದರಿಂದ ಅವರೊಂದಿಗೆ ಪ್ರವಾದಿವರ್ಯರ ಪ್ರೇಮಭರಿತ ಸದ್ವರ್ತನೆಯ ಘಟನೆಗಳೂ ಹೆಚ್ಚು ಕಾಣ ಸಿಗುತ್ತದೆ. ಇದರಿಂದ, ಪತ್ನಿ ಕಿರಿಯ ಪ್ರಾಯದವಳೂ ಅನನುಭವಿಯೂ ಆಗಿದ್ದರೆ ಪತಿಯಾದವನು ಆಕೆಯ ತರಬೇತಿ ಮತ್ತು ಆಕೆಯೊಂದಿಗೆ ಉತ್ತಮವಾಗಿ ವರ್ತಿಸುವ ಕಾರ್ಯದಲ್ಲಿ ಹೆಚ್ಚು ಗಮನಹರಿಸಬೇಕೆಂದು ವಿದ್ವಾಂಸರು

ಅಭಿಪ್ರಾಯಪಟ್ಟಿದ್ದಾರೆ. ಏಕೆಂದರೆ ಕಿರಿಯ ಪ್ರಾಯ ಮತ್ತು ಅನುಭವದ ಕೊರತೆಯಿಂದಾಗಿ ಆಕೆಯ ಕೆಲವೊಂದು ಮಾತುಗಳು ಪತಿಗೆ ಕೋಪ ಬರಿಸುವ ಸಾಧ್ಯತೆಯಿದೆ.

## ಕೆಲವು ಉಪದೇಶಗಳು

ಈ ಪ್ರಬಂಧವನ್ನು ಕೊನೆಗೊಳಿಸುವುದಕ್ಕೆ ಮುಂಚೆ ಪತಿ-ಪತ್ನಿಯರಿಗೆ ಕೆಲವು ಉಪದೇಶಗಳನ್ನು ನೀಡುವುದು ಸಮಂಜಸವೆನಿಸುತ್ತದೆ.

1. ಉಭಯತರರೂ ಅಲ್ಲಾಹನ ಗ್ರಂಥ ಮತ್ತು ಪ್ರವಾದಿಚರ್ಯೆಯಿಂದ ಸಾಬೀತು ಗೊಂಡಿರುವ ವಿಧಿಗಳನ್ನು ಸಂಪೂರ್ಣ ವಿಧೇಯತೆ ಮತ್ತು ಮನಃಸಂತೃಪ್ತಿಯೊಂದಿಗೆ ಪಾಲಿಸಬೇಕು.

ಅಲ್ಲಾಹನು ಹೀಗೆಂದಿದ್ದಾನೆ- 'ಅಲ್ಲಾಹ್ ಮತ್ತು ಅವನ ಸಂದೇಶವಾಹಕರು ಯಾವುದಾದರೊಂದು ವಿಷಯದ ತೀರ್ಮಾನ ಮಾಡಿಬಿಟ್ಟರೆ ಆ ವಿಷಯದಲ್ಲಿ ಸ್ವತಃ ತೀರ್ಮಾನ ಕೈಗೊಳ್ಳುವ ಹಕ್ಕು (ಸತ್ಯವಿಶ್ವಾಸಿಗಳಾದ) ಯಾವ ಸ್ತ್ರೀ-ಪುರುಷನಿಗೂ ಇಲ್ಲ. ಯಾರಾದರೂ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದರೆ ಅವನು ಸುವಕ್ತ ಪಥಭ್ರಷ್ಟತೆಯಲ್ಲಿ ಬಿದ್ದುಬಿಟ್ಟನು.

(ಅಲ್ ಅಹ್‌ಝಾಬ್-36)

2. ಪತಿ-ಪತ್ನಿಯರ ಮೇಲೆ ಅಲ್ಲಾಹನು ವಹಿಸಿಕೊಟ್ಟಿರುವ ಹೊಣೆಗಾರಿಕೆಗಳನ್ನೂ ಅಧಿಕಾರಗಳನ್ನೂ ಅವರು ಪಾಲಿಸಬೇಕು. ಉದಾ: ಪತ್ನಿಯಾದವಳು ತನ್ನ ಪತಿಯ ಎಲ್ಲ ಹಕ್ಕು-ಅಧಿಕಾರಗಳಲ್ಲಿ ಸಮಾನವಾಗಿರಲು ಪ್ರಯತ್ನಿಸಬಾರದು. ಏಕೆಂದರೆ ಅಲ್ಲಾಹನು ಪುರುಷನಿಗೆ ಸ್ತ್ರೀಯರಿಗಿಂತ ಒಂದು ಪದವಿ ಹೆಚ್ಚು ನೀಡಿದ್ದಾನೆ. ಅವರನ್ನು ಸ್ತ್ರೀಯರ ಕವ್ವಾಮ್ (ಮೇಲ್ವಿಚಾರಕ) ಆಗಿ ಮಾಡಿದ್ದಾನೆ. ಅದೇ ರೀತಿ ಪುರುಷನು ಸ್ತ್ರೀಯಿಂದ ಶರೀಅತ್‌ಗೆ ವಿರುದ್ಧವಾದ ಯಾವುದೇ ವಿಷಯವನ್ನು ಅಪೇಕ್ಷಿಸಬಾರದು. ಆಕೆಯನ್ನು ತುಚ್ಛವಾಗಿಯೂ ಕಾಣಬಾರದು. ಉಭಯತರರೂ ಅಲ್ಲಾಹ್ ಮತ್ತು ಆತನ ಸಂದೇಶವಾಹಕರ ಆಜ್ಞಾವಿಧಿಗಳನ್ನು ಪಾಲಿಸುತ್ತಾ ಪರಸ್ಪರ ಹಕ್ಕು ಬಾಧ್ಯತೆಗಳನ್ನು ಈಡೇರಿಸುತ್ತಲಿದ್ದರೆ ಅಲ್ಲಾಹನು ತನ್ನ ವಾಗ್ದಾನದಂತೆ ಅವರಿಗೆ ಉತ್ತಮ ಜೀವನವನ್ನು ದಯಪಾಲಿಸುವನು.

ಪುರುಷನಾಗಿರಲಿ, ಸ್ತ್ರೀಯಾಗಿರಲಿ ಯಾರು ಸತ್ಕರ್ಮವೆಸಗುವರೋ ಅವರು ಸತ್ಯವಿಶ್ವಾಸಿಯಾಗಿದ್ದರೆ ಅವರಿಗೆ ನಾವು ಇಹಲೋಕದಲ್ಲಿ ಪರಿಶುದ್ಧ ಜೀವನವನ್ನು ದಯಪಾಲಿಸುವೆವು ಮತ್ತು ಅಂಥವರಿಗೆ (ಪರಲೋಕದಲ್ಲಿ) ಅವರ ಅತ್ಯುತ್ತಮ ಕರ್ಮಗಳಿಗನುಸಾರ ಪ್ರತಿಫಲ ನೀಡುವೆವು. (ಅನ್ನಹ್ಲ್: 97)

3. ಪತ್ನಿಯು ಸಾಧ್ಯವಾದಷ್ಟು ಒಳಿತಿನ ಕಾರ್ಯಗಳಲ್ಲಿ ತನ್ನ ಪತಿಯನ್ನು ಕಡ್ಡಾಯವಾಗಿ ಅನುಸರಿಸಬೇಕು. ಇದನ್ನು ಸಮರ್ಥಿಸುವಂತಹ ಅನೇಕ ಪ್ರವಾದಿ ವಚನಗಳಿವೆ.

(ಅ) ಪತಿಯು ಹತ್ತಿರವಿರುವಾಗ ಆತನ ಅನುಮತಿಯಿಲ್ಲದೆ ಐಚ್ಛಿಕ ಉಪವಾಸವನ್ನು ಆಚರಿಸುವುದಾಗಲಿ, ಆತನ ಅನುಮತಿಯಿಲ್ಲದೆ ಯಾರನ್ನಾದರೂ ಮನೆಯೊಳಗೆ ಬರಲು ಬಿಡುವುದಾಗಲಿ ಪತ್ನಿಗೆ ಧರ್ಮಸಮ್ಮತವಲ್ಲ.

(ಬುಖಾರಿ, ಮುಸ್ಲಿಮ್, ಅಬೂದಾವೂದ್, ತಿರ್ಮಿದಿ)

(ಆ) ಪತಿಯು ಪತ್ನಿಯನ್ನು ಹಾಸಿಗೆಗೆ ಕರೆದಾಗ ಆಕೆ ಬಾರದೆ ಇದ್ದಾಗ ಆತ ಕೋಪಗೊಂಡು ಮಲಗಿದರೆ ಬೆಳಗಾಗುವ ವರೆಗೆ ಆಕೆಯ ಮೇಲೆ ದೇವಚರರು ಶಾಪ ಹಾಕುತ್ತಾರೆ.

ಇನ್ನೊಂದು ವರದಿಯಲ್ಲಿ "ಪತಿಯು ಆಕೆಯಿಂದ ಪ್ರಸನ್ನನಾಗುವ ವರೆಗೆ" ಎಂದಿದೆ.

(ಬುಖಾರಿ, ಮುಸ್ಲಿಮ್, ಅಬೂದಾವೂದ್)

ಇದು ಪತ್ನಿಯು ಯಾವುದೇ ಧರ್ಮಬದ್ಧ ಅಡಚಣೆ ಇಲ್ಲದಾಗ ಮಾತ್ರ ಸಾಧ್ಯ. ಅನ್ಯಥಾ ಆಕೆಗೆ ಯಾವುದೇ ಧರ್ಮಬದ್ಧ ಅಡಚಣೆ (ಉದಾ: ಆರ್ತವ) ಅಥವಾ ಸ್ವಾಭಾವಿಕ ನೆವನ (ಉದಾ: ಜ್ವರ ಇತ್ಯಾದಿ) ಇದ್ದರೆ ಆಕೆ ಅದನ್ನು ಆತನಿಗೆ ಬಿಡಿಸಿ ಹೇಳಬೇಕು. ಅದರ ಹೊರತಾಗಿಯೂ ಆತ ಒತ್ತಾಯಪಡಿಸಿದರೆ ಆತನೇ ಪಾಪಿಯಾಗುವನು.

(ಇ) ಮುಹಮ್ಮದ್‌ನ(ಸ) ಪ್ರಾಣ ಯಾರ ಕೈಯಲ್ಲಿದೆಯೋ ಆತನಾಣೆ! ಸ್ತ್ರೀಯು ತನ್ನ ಪತಿಯ ಹಕ್ಕು ಬಾಧ್ಯತೆಗಳನ್ನು ಈಡೇರಿಸುವ ತನಕ ತನ್ನ ಪ್ರಭುವಿನ ಹಕ್ಕುಗಳನ್ನು ಪೂರೈಸಲಾರಳು. ಪತಿಯು ಆಕೆಯನ್ನು ಒಂಟೆಯ ಡುಬ್ಬದ ಮೇಲೆ ಕರೆದರೂ ಆಕೆ ನಿರಾಕರಿಸಬಾರದು. (ಇಬ್ನುಮಾಜಃ, ಅಹ್ಮದ್, ಇಬ್ನುಹಿಬ್ಬಾನ್, ಹಾಕಿಮ್)

(ಈ) ಸ್ತ್ರೀಯು ಐದು ಹೊತ್ತಿನ ನಮಾಝ್ ಸರಿಯಾಗಿ ಮಾಡುತ್ತ, ರಮಝಾನ್ ತಿಂಗಳ ಉಪವಾಸ ವ್ರತ ಆಚರಿಸುತ್ತ ಮತ್ತು ತನ್ನ ಗುಪ್ತಾಂಗವನ್ನು ರಕ್ಷಿಸುತ್ತಾ ಪತಿಯನ್ನು ಅನುಸರಿಸುತ್ತಲಿದ್ದರೆ ಆಕೆ ಸ್ವರ್ಗಕ್ಕೆ ಯಾವ ಬಾಗಿಲಿನ ಮೂಲಕ ಬೇಕಾದರೂ ಪ್ರವೇಶಿಸಬಹುದು. (ಅಹ್ಮದ್, ತಬ್ರಾನಿ, ಇಬ್ನುಹಿಬ್ಬಾನ್)

ಓರ್ವ ಪುರುಷ ಮತ್ತು ಓರ್ವ ಸ್ತ್ರೀಯ ಮಿಲನದಿಂದ ಕುಟುಂಬದ ಆರಂಭ ವಾಗುತ್ತದೆ. ಕುಟುಂಬಗಳ ಸೇರ್ಪಡೆಯಿಂದ ಸಮಾಜ ನಿರ್ಮಾಣವಾಗುತ್ತದೆ. ಪ್ರತಿಯೊಬ್ಬ ಮುಸ್ಲಿಮ್ ಸ್ತ್ರೀ-ಪುರುಷರು ಇಸ್ಲಾಮೀ ಶಿಕ್ಷಣದಂತೆ ಪ್ರಾಮಾಣಿಕವಾಗಿ ಜೀವಿಸಿದರೆ ಪ್ರವಾದಿ ಮುಹಮ್ಮದ್(ಸ) ಅವರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದಂತಹ ಉತ್ತಮ ಇಸ್ಲಾಮೀ ಸಮಾಜವು ಇಂದಿಗೂ ಬರುವುದರಲ್ಲಿ ಸಂದೇಹವಿಲ್ಲ.

***